Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)


भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

सं–1 नई दिल्ली सोमवार, जनवरी 20, 1992 पुष्य 30, 1913 (शक) खन्ड–13
ಸಂಚಿಕೆ ೧ ನವದೆಹಲಿ ಸೋಮವಾರ, ಜನವರಿ ೨೦, ೧೯೯೨ ಪುಷ್ಯ ೩೦, ೧೯೧೩ (ಶಕ) ಸಂಪುಟ ೧೩
No. 1 New Delhi Monday, January 20, 1992 Pushya 30, 1913 (Saka) Vol. 13


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ ಅಧಿನಿಯಮ, ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) ಜನನ, ಮರಣ ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ (೧೯೭೩ರ ೫೦)ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಪರಿಗಣಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ – (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳೆಯರ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯಗಳು ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವುದನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copyright Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ —(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸ[illegible]

# ನಾಗರಿಕತ್ವ ಅಧಿನಿಯಮ, 1955

## (1955ರ ಸಂಖ್ಯೆ 57)

[30ನೇ ಡಿಸೆಂಬರ್, 1955.]

ಭಾರತದ ನಾಗರಿಕತ್ವದ ಆರ್ಜನೆ ಮತ್ತು ನಿರ್ಧರಣೆಗಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಆರನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು.–** ಈ ಅಧಿನಿಯಮವನ್ನು ನಾಗರಿಕತ್ವ ಅಧಿನಿಯಮ, 1955 ಎಂದು ಕರೆಯತಕ್ಕದ್ದು.

**2. ಅರ್ಥವಿವರಣೆ.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಭಾರತದಲ್ಲಿನ ಸರ್ಕಾರ" ಎಂದರೆ, ಕೇಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ;

(ಬಿ) "ಕಾನೂನುಬಾಹಿರ ವಲಸಿಗ" ಎಂದರೆ:–

(i) ಯಾವುದೇ ಅಂಗೀಕಾರಾರ್ಹ ಪಾಸ್‌ಪೋರ್ಟ್ ಅಥವಾ ಇತರೆ ಪ್ರಯಾಣ ದಾಖಲೆಗಳಿಲ್ಲದೆ ಮತ್ತು ಆ ಬಗ್ಗೆ ಯಾವುದೇ ಕಾನೂನಿನಲ್ಲಿ ಅಥವಾ ಅದರಡಿಯಲ್ಲಿ ನಿಯಮಿಸಬಹುದಾದ ಇತರ ದಾಖಲೆ ಇಲ್ಲದೆಯೇ ಅಥವಾ ಅಧಿಕಾರಪತ್ರ ಇಲ್ಲದೆಯೇ ಭಾರತದ ಒಳಗಡೆಗೆ ಪ್ರವೇಶಿಸಿದ; ಅಥವಾ

(ii) ಅಂಗೀಕಾರಾರ್ಹ ಪಾಸ್‌ಪೋರ್ಟ್‌ನೊಂದಿಗೆ ಅಥವಾ ಇತರ ಪ್ರಯಾಣ ದಾಖಲೆಗಳೊಂದಿಗೆ ಮತ್ತು ಆ ಬಗ್ಗೆ ಯಾವುದೇ ಕಾನೂನಿನಲ್ಲಿ ಅಥವಾ ಅದರಡಿಯಲ್ಲಿ ನಿಯಮಿಸಬಹುದಾದಂಥ ಇತರ ದಾಖಲೆಯೊಂದಿಗೆ ಅಥವಾ ಅಧಿಕಾರಪತ್ರದೊಂದಿಗೆ ಭಾರತದ ಒಳಗಡೆಗೆ ಪ್ರವೇಶಿಸಿದ ಆದರೆ ಅನುಮತಿಸಿದ ಕಾಲಾವಧಿಗೂ ಮೀರಿ ಭಾರತದಲ್ಲಿ ಉಳಿದುಕೊಂಡಿರುವ

–ವಿದೇಶೀಯ:

ಪರಂತು, ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಅಥವಾ ಕ್ರಿಶ್ಚಿಯನ್ ಸಮುದಾಯದ ಯಾವ ವ್ಯಕ್ತಿಯು ಅಫ್ಘಾನಿಸ್ತಾನದಿಂದ, ಬಾಂಗ್ಲಾದೇಶದಿಂದ ಅಥವಾ ಪಾಕಿಸ್ತಾನದಿಂದ 2014ರ ಡಿಸೆಂಬರ್ 31ನೇಯ ದಿನದಂದು ಅಥವಾ ಅದಕ್ಕೂ ಮುಂಚೆ ಭಾರತವನ್ನು ಪ್ರವೇಶಿಸಿರುವನೋ ಮತ್ತು

ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ 34)ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಪ್ರಕಾರ ಅಥವಾ ಆ (ಸಿ) ಖಂಡದ ಮೇರೆಗೆ ಕೇಂದ್ರ ಸರ್ಕಾರದಿಂದ ಅಥವಾ ವಿದೇಶೀಯರ ಅಧಿನಿಯಮ, 1946 (1946ರ 31)ರ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮದ ಉಪಬಂಧಗಳು ಅಥವಾ ಮಾಡಿದ ಆದೇಶದ ಅನ್ವಯವಾಗದಂತೆ ವಿನಾಯಿತಿ ಪಡೆದಿರುವನೋ ಆ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾನೂನುಬಾಹಿರ ವಲಸಿಗನೆಂದು ಪರಿಗಣಿಸತಕ್ಕದ್ದಲ್ಲ.

(ಡಿ) "ಭಾರತ ಕಾನ್ಸಲ್ ಕಚೇರಿ" ಎಂದರೆ, ಜನನಗಳ ರಿಜಿಸ್ಟರನ್ನು ಇಟ್ಟಿರುವ ಭಾರತ ಸರ್ಕಾರದ ಯಾವುದೇ ಕಾನ್ಸಲ್ ಅಧಿಕಾರಿಯ ಕಚೇರಿ ಅಥವಾ ಅಂಥ ಕಚೇರಿಯಿಲ್ಲದಿದ್ದಲ್ಲಿ ನಿಯಮಿಸಬಹುದಾದಂಥ ಯಾವುದೇ ಕಚೇರಿ;

(ಇ) "ಅಪ್ರಾಪ್ತ ವಯಸ್ಕ" ಎಂದರೆ, ಹದಿನೆಂಟು ವರ್ಷಗಳು ತುಂಬಿಲ್ಲದ ವ್ಯಕ್ತಿ;

(ಇಇ) "ಭಾರತೀಯ ಸಾಗರೋತ್ತರ ನಾಗರಿಕ" ಎಂದರೆ, 7ಎ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಭಾರತೀಯ ಸಾಗರೋತ್ತರ ನಾಗರಿಕನೆಂದು ನೋಂದಾಯಿತನಾದ ವ್ಯಕ್ತಿ;

(ಎಫ್) "ವ್ಯಕ್ತಿ" ಎಂಬುದು ನಿಗಮಿತವಾಗಿರುವ ಅಥವಾ ಆಗಿಲ್ಲದ ಯಾವುದೇ ಕಂಪನಿ ಅಥವಾ ಸಂಘ ಅಥವಾ ವ್ಯಕ್ತಿಗಳ ನಿಕಾಯವನ್ನು ಒಳಗೊಳ್ಳುವುದಿಲ್ಲ;

(ಜಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ಅವಿಭಾಜ್ಯ ಭಾರತ" ಎಂದರೆ, ಮೂಲದಲ್ಲಿ ಅಧಿನಿಯಮಿತವಾದಂತೆ ಭಾರತ ಸರ್ಕಾರದ ಅಧಿನಿಯಮ, 1935ರಲ್ಲಿ ಪರಿಭಾಷಿಸಿದ ಭಾರತ.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ, ಯಾವುದೇ ದೇಶದ ಸರ್ಕಾರದ ನೋಂದಾಯಿಸಿದ ನೌಕೆ ಅಥವಾ ವಿಮಾನದಲ್ಲಿ ಅಥವಾ ನೋಂದಾಯಿಸಿಲ್ಲದ ನೌಕೆ ಅಥವಾ ವಿಮಾನದಲ್ಲಿ ಹುಟ್ಟಿದ ವ್ಯಕ್ತಿಯನ್ನು, ಸಂದರ್ಭಾನುಸಾರ ಆ ನೌಕೆ ಅಥವಾ ವಿಮಾನವನ್ನು ನೋಂದಾಯಿಸಲಾದ ಸ್ಥಳದಲ್ಲಿ ಅಥವಾ ಆ ದೇಶದಲ್ಲಿ ಹುಟ್ಟಿದವನೆಂಬುದಾಗಿ ಭಾವಿಸತಕ್ಕದ್ದು.

(3) ವ್ಯಕ್ತಿಯು ಹುಟ್ಟಿದ ಕಾಲದಲ್ಲಿ ಅವನ ತಂದೆಯ ಸ್ಥಾನಮಾನ ಅಥವಾ ವಿವರಣೆಗೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವು, ಅವನ ತಂದೆಯ ಮರಣದ ನಂತರ ಹುಟ್ಟಿದ ವ್ಯಕ್ತಿಗೆ ಸಂಬಂಧಪಟ್ಟಂತೆ, ಆ ತಂದೆಯ ಮರಣದ ಕಾಲದಲ್ಲಿ ಆ ತಂದೆಯ ಸ್ಥಾನಮಾನ ಅಥವಾ ವಿವರಣೆಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಆ ಮರಣವು ಸಂಭವಿಸಿದ್ದು, ಜನನವು ಅನಂತರ ಸಂಭವಿಸಿರುವಲ್ಲಿ, ಈ ಅಧಿನಿಯಮವು ಪ್ರಾರಂಭವಾದ ತರುವಾಯ ಆ ತಂದೆಗೆ ಅನ್ವಯವಾಗಬಹುದಾಗಿದ್ದ ಸ್ಥಾನಮಾನ ಅಥವಾ ವಿವರಣೆಯು, ಅವನ ಮರಣ ಕಾಲದಲ್ಲಿ, ಅವನಿಗೆ ಅನ್ವಯವಾಗಬೇಕಾದ ಸ್ಥಾನಮಾನ ಅಥವಾ ವಿವರಣೆಯೆಂದು ಭಾವಿಸತಕ್ಕದ್ದು.

(4) ಈ ಅಧಿನಿಯಮದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯನ್ನು ಅವನು ಅಪ್ರಾಪ್ತ ವಯಸ್ಕನಲ್ಲದಿದ್ದರೆ, ಪೂರ್ಣ ವಯಸ್ಕನೆಂದು ಮತ್ತು ಅಸ್ವಸ್ಥಚಿತ್ತನಲ್ಲದಿದ್ದರೆ, ಪೂರ್ಣ ಸಾಮರ್ಥ್ಯವುಳ್ಳವನೆಂದು ಭಾವಿಸತಕ್ಕದ್ದು.

## ನಾಗರಿಕತ್ವದ ಆರ್ಜನೆ

**3. ಜನ್ಮತಃ ನಾಗರಿಕತ್ವ.**– (1) ಉಪಪ್ರಕರಣ (2)ರಲ್ಲಿ ಉಪಬಂಧಿಸಿರುವುದರ ಹೊರತು,–

(ಎ) 1950ರ ಜನವರಿ 26ನೇ ದಿನದಂದು ಅಥವಾ ಆ ತರುವಾಯ ಆದರೆ, 1987ರ ಜುಲೈ 1ನೇ ದಿನಕ್ಕೂ ಮುಂಚೆ ಜನಿಸಿರುವನೋ;

(ಬಿ) 1987ರ ಜುಲೈ 1ನೇ ದಿನದಂದು ಅಥವಾ ಆ ತರುವಾಯ ಆದರೆ, ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2003 (2004ರ 6)ರ ಪ್ರಾರಂಭಕ್ಕೂ ಮುಂಚೆ ಜನಿಸಿರುವನೋ ಅವನ ಜನನದ ಕಾಲದಲ್ಲಿ ಅವನ ತಂದೆ–ತಾಯಿ ಪೈಕಿ ಯಾರಾದರೂ ಭಾರತದ ನಾಗರಿಕರಾಗಿದ್ದರೋ;

(ಸಿ) ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2003 (2004ರ 6)ರ ಪ್ರಾರಂಭದಂದು ಅಥವಾ ತರುವಾಯ ಜನಿಸಿರುವನೋ ಮತ್ತು ಅವನ,–

(i) ತಂದೆ–ತಾಯಿ ಇಬ್ಬರೂ ಭಾರತದ ನಾಗರಿಕರಾಗಿದ್ದರೋ, ಅಥವಾ

(ii) ಜನನದ ಕಾಲದಲ್ಲಿ, ಅವನ ತಂದೆ–ತಾಯಿ ಪೈಕಿ ಒಬ್ಬರು ಭಾರತದ ನಾಗರಿಕರಾಗಿದ್ದು, ಇನ್ನೊಬ್ಬರು ಕಾನೂನುಬಾಹಿರ ವಲಸಿಗರಲ್ಲವೋ

–ಆ ವ್ಯಕ್ತಿಯು ಜನ್ಮತಃ ಭಾರತದ ನಾಗರಿಕನಾಗಿರತಕ್ಕದ್ದು.

(2) ಯಾವ ವ್ಯಕ್ತಿಯ ಜನನ ಕಾಲದಲ್ಲಿ,–

(ಎ) ಭಾರತದ ರಾಷ್ಟ್ರಪತಿಯವರು ವಿದೇಶಿ ಸಾರ್ವಭೌಮ ಸರ್ಕಾರದ ರಾಜದೂತನಿಗೆ ದಾವೆಗಳಿಗೆ ಹಾಗೂ ಕಾನೂನು ಕ್ರಮಕ್ಕೆ ಒಳಗಾಗದಂತೆ ರಕ್ಷಣೆಯನ್ನು ಪ್ರದಾನ ಮಾಡಿರುವನೋ ಅಂಥವುಗಳೇ ಅವನ ತಂದೆಗೆ ಅಥವಾ ತಾಯಿಗೆ ಇದ್ದವೋ ಮತ್ತು ಸಂದರ್ಭಾನುಸಾರ ಆ ತಂದೆಯು ಅಥವಾ ತಾಯಿಯು ಭಾರತದ ನಾಗರಿಕರಲ್ಲವೋ; ಅಥವಾ

(ಬಿ) ಅವನ ತಂದೆಯು ಅಥವಾ ತಾಯಿಯು ಅನ್ಯದೇಶೀಯ ಶತ್ರುವಾಗಿದ್ದರೆ ಮತ್ತು ಶತ್ರುವು ಆಗ ಆಕ್ರಮಿಸಿಕೊಂಡಿದ್ದ ಸ್ಥಳದಲ್ಲಿ ಜನಿಸಿದ್ದನೋ

–ಆ ವ್ಯಕ್ತಿಯು ಈ ಪ್ರಕರಣದ ಬಲದಿಂದ ಭಾರತದ ನಾಗರಿಕನಾಗತಕ್ಕದ್ದಲ್ಲ.

**4. ವಂಶಪರಂಪರೆ ನಾಗರಿಕತ್ವ.–** (1) ಭಾರತದ ಹೊರಗಡೆ ಜನಿಸಿದ ವ್ಯಕ್ತಿಯು,–

(ಎ) 1950ರ ಜನವರಿ 26ರಂದು ಅಥವಾ ಆ ತರುವಾಯ ಆದರೆ, 1992ರ ಡಿಸೆಂಬರ್ 10ಕ್ಕೂ ಮುಂಚೆ ಜನಿಸಿದ್ದರೆ, ಅವನು ಜನಿಸಿದ ಕಾಲದಲ್ಲಿ ಅವನ ತಂದೆಯು ಭಾರತದ ನಾಗರಿಕನಾಗಿದ್ದರೆ; ಅಥವಾ

(ಬಿ) 1992ರ ಡಿಸೆಂಬರ್ 10ರಂದು ಅಥವಾ ಆ ತರುವಾಯ ಜನಿಸಿದ್ದರೆ, ಅವನು ಜನಿಸಿದ ಕಾಲದಲ್ಲಿ ಅವನ ತಂದೆ–ತಾಯಿ ಪೈಕಿ ಯಾರಾದರೂ ಭಾರತದ ನಾಗರಿಕರಾಗಿದ್ದರೆ

– ವಂಶಪರಂಪರೆ ಪ್ರಕಾರ ಭಾರತದ ನಾಗರಿಕನಾಗತಕ್ಕದ್ದು:

ಪರಂತು, (ಎ) ಖಂಡದಲ್ಲಿ ಹೇಳಿರುವ ವ್ಯಕ್ತಿಯ ತಂದೆಯು ವಂಶಪರಂಪರೆಯಂತೆ ಮಾತ್ರವೇ ಭಾರತದ ನಾಗರಿಕನಾಗಿದ್ದಿದ್ದರೆ ಆ ವ್ಯಕ್ತಿಯ,–

(ಎ) ಅವನು ಜನಿಸಿದ್ದನ್ನು, ಜನನದ ಒಂದು ವರ್ಷದ ಒಳಗೆ ಅಥವಾ ಈ ಅಧಿನಿಯಮವು ಪ್ರಾರಂಭವಾದ ಒಂದು ವರ್ಷದ ಒಳಗೆ, ಇದರಲ್ಲಿ ಯಾವುದು ಅನಂತರದ್ದೋ, ಆ ಒಂದು ವರ್ಷದ ಒಳಗೆ ಅಥವಾ ಈ ಅವಧಿಯು ಮುಕ್ತಾಯವಾದ ಅನಂತರ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಭಾರತದ ಕಾನ್ಸುಲೇಟ್‌ನಲ್ಲಿ ನೋಂದಾಯಿಸಿದ್ದ ಹೊರತು; ಅಥವಾ

(ಬಿ) ಅವನು ಜನಿಸಿದ ಕಾಲದಲ್ಲಿ ಅವನ ತಂದೆ–ತಾಯಿ ಪೈಕಿ ಯಾರಾದರೂ ಭಾರತ ಸರ್ಕಾರದ ಸೇವೆಯಲ್ಲಿದ್ದ ಹೊರತು

-ಈ ಪ್ರಕರಣದ ಬಲದಿಂದ ಭಾರತದ ನಾಗರಿಕನಾಗತಕ್ಕದ್ದಲ್ಲ:

ಮತ್ತೂ ಪರಂತು, (ಬಿ) ಖಂಡದಲ್ಲಿ ಹೇಳಿರುವ ವ್ಯಕ್ತಿಯ ತಂದೆ–ತಾಯಿ ಯಾರಾದರೂ ವಂಶಪರಂಪರೆ ಪ್ರಕಾರ ಮಾತ್ರವೇ ಭಾರತದ ನಾಗರಿಕರಾಗಿದ್ದರೆ, ಆ ವ್ಯಕ್ತಿಯು,–

(ಎ) ಅವನು ಜನಿಸಿದ್ದನ್ನು ಜನನವಾದ ಒಂದು ವರ್ಷದ ಒಳಗೆ ಅಥವಾ 1992ರ ಡಿಸೆಂಬರ್ 10ರಂದು ಅಥವಾ ಆ ತರುವಾಯ ಇದರಲ್ಲಿ ಯಾವುದು ನಂತರದ್ದೋ ಆಗ ಅಥವಾ ಈ ಅವಧಿಯು ಮುಕ್ತಾಯವಾದ ಮೇಲೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು ಭಾರತದ ಕಾನ್ಸುಲೇಟ್‌ನಲ್ಲಿ ನೋದಾಯಿಸಿದ್ದ ಹೊರತು; ಅಥವಾ

(ಬಿ) ಅವನ ಜನನದ ಕಾಲದಲ್ಲಿ ಅವನ ತಂದೆ–ತಾಯಿ ಪೈಕಿ, ಯಾರಾದರೂ ಭಾರತ ಸರ್ಕಾರದ ಸೇವೆಯಲ್ಲಿದ್ದ ಹೊರತು

–ಈ ಪ್ರಕರಣದ ಬಲದಿಂದ ಭಾರತದ ನಾಗರಿಕನಾಗತಕ್ಕದ್ದಲ್ಲ:

ಮತ್ತೂ ಪರಂತು, ವ್ಯಕ್ತಿಯು,–

(i) ಅವನು ಜನಿಸಿದ್ದನ್ನು, ಜನನವಾದ ಒಂದು ವರ್ಷದ ಒಳಗೆ ಅಥವಾ ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2003 (2004ರ 6)ರ ಪ್ರಾರಂಭದ ಒಂದು ವರ್ಷದ ಒಳಗೆ, ಇದರಲ್ಲಿ ಯಾವುದು ನಂತರದ್ದೋ ಆಗ; ಅಥವಾ

(ii) ಸದರಿ ಅವಧಿಯು ಮುಗಿದ ತರುವಾಯ ಕೇಂದ್ರ ಸರ್ಕಾರದಿಂದ ಅನುಮತಿ ಪಡೆದು

– ನಿಯಮಿಸಿರಬಹುದಾದಂಥ ನಮೂನೆಯಲ್ಲಿ ಅಥವಾ ರೀತಿಯಲ್ಲಿ ಭಾರತದ ಕಾನ್ಸುಲೇಟ್‌ನಲ್ಲಿ ತನ್ನ ಜನನವನ್ನು ನೋಂದಾಯಿಸಿದ್ದ ಹೊರತು ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2003 (2004ರ 6)ರ ಪ್ರಾರಂಭದಂದು ಅಥವಾ ಆ ತರುವಾಯ ಈ ಪ್ರಕರಣದ ಬಲದಿಂದ ಭಾರತದ ನಾಗರಿಕನಾಗತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ವ್ಯಕ್ತಿಯ ತಂದೆ–ತಾಯಿಯ, ನಿಯಮಿಸಿರಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅಪ್ರಾಪ್ತ ವಯಸ್ಕನು ಇನ್ನೊಂದು ದೇಶದ ಪಾಸ್‌ಪೋರ್ಟನ್ನು ಹೊಂದಿಲ್ಲವೆಂದು ಘೋಷಿಸಿದ್ದ ಹೊರತು ಅಂಥ ಯಾವ ಜನನವನ್ನು ನೋಂದಾಯಿಸತಕ್ಕದ್ದಲ್ಲ.

(1ಎ) ಈ ಪ್ರಕರಣದ ಬಲದಿಂದ ಯಾವ ಅಪ್ರಾಪ್ತ ವಯಸ್ಕನು ಭಾರತದ ನಾಗರಿಕನಲ್ಲವೋ ಮತ್ತು ಯಾವುದೇ ಇತರ ದೇಶದ ನಾಗರಿಕನಾಗಿರುವನೋ ಆ ಅಪ್ರಾಪ್ತ ವಯಸ್ಕನು ಆ ಇನ್ನೊಂದು ದೇಶದ

ನಾಗರಿಕತ್ವವನ್ನು ಅಥವಾ ರಾಷ್ಟ್ರೀಯತೆಯನ್ನು, ಪ್ರಾಪ್ತ ವಯಸ್ಕನಾದಾಗ ಆರು ತಿಂಗಳೊಳಗೆ ತ್ಯಜಿಸಿರದಿದ್ದರೆ ಅವನು ಭಾರತದ ನಾಗರಿಕನಾಗಿರುವುದು ನಿಂತುಹೋಗತಕ್ಕದ್ದು.

(2) ಕೇಂದ್ರ ಸರ್ಕಾರವು ಹಾಗೆ ನಿರ್ದೇಶಿಸಿದರೆ, ನೋಂದಾಯಿಸುವುದಕ್ಕೆ ಮುಂಚಿತವಾಗಿ ಅದರ ಅನುಮತಿ ಪಡೆಯದೇ ಇದ್ದಾಗ್ಯೂ, ಈ ಪ್ರಕರಣದ ಉದ್ದೇಶಗಳಿಗಾಗಿ, ಸರ್ಕಾರದ ಅನುಮತಿಯೊಂದಿಗೆ ಹುಟ್ಟನ್ನು ನೋಂದಾಯಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಉಪಪ್ರಕರಣ (1)ರ ಪರಂತುಕದ ಉದ್ದೇಶಗಳಿಗಾಗಿ, ಸಂವಿಧಾನವು ಪ್ರಾರಂಭವಾದ ಕಾಲದಲ್ಲಿ, ಭಾರತದ ನಾಗರಿಕನಾಗಿದ್ದ ಅಥವಾ ನಾಗರಿಕನೆಂದು ಭಾವಿಸಲಾದ ಯಾರೇ ವ್ಯಕ್ತಿಯು ಅವಿಭಾಜ್ಯ ಭಾರತದ ಹೊರಗೆ ಹುಟ್ಟಿದರೆ, ಅವನನ್ನು ಸಂತತಿ ಮೂಲಕ ಮಾತ್ರವೇ ಭಾರತದ ನಾಗರಿಕನೆಂದು ಭಾವಿಸತಕ್ಕದ್ದು.

5. **ನೋಂದಣಿ ಮೂಲಕ ನಾಗರಿಕತ್ವ**.– (1) ಯಾವ ವ್ಯಕ್ತಿಯು ಸಂವಿಧಾನದ ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಬಲದಿಂದ ಈಗಾಗಲೇ ಭಾರತದ ನಾಗರಿಕನಲ್ಲವೋ ಹಾಗೂ ಕಾನೂನುಬಾಹಿರ ವಲಸಿಗನಲ್ಲವೋ ಆ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ, ಅವನು ಈ ಕೆಳಕಂಡ ಪ್ರವರ್ಗಗಳಲ್ಲಿ ಯಾವುದೇ ವರ್ಗಕ್ಕೆ ಒಳಪಡುವವನಾಗಿದ್ದರೆ, ಎಂದರೆ:–

(ಎ) ನೋಂದಣಿಗಾಗಿ ಅರ್ಜಿ ಸಲ್ಲಿಸುವುದಕ್ಕೂ ಮುಂಚಿನ ಏಳು ವರ್ಷಗಳ ಕಾಲ ಆ ವ್ಯಕ್ತಿಯು ಭಾರತದಲ್ಲಿ ಸಾಮಾನ್ಯ ನಿವಾಸಿಯಾಗಿದ್ದರೆ;

(ಬಿ) ಆ ವ್ಯಕ್ತಿಯು ಅವಿಭಾಜ್ಯ ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅಥವಾ ಸ್ಥಳದಲ್ಲಿ ಸಾಮಾನ್ಯ ನಿವಾಸಿಯಾಗಿದ್ದರೆ;

(ಸಿ) ಭಾರತದ ನಾಗರಿಕನನ್ನು ವಿವಾಹವಾಗಿರುವ ಮತ್ತು ನೋಂದಣಿಗಾಗಿ ಅರ್ಜಿ ಸಲ್ಲಿಸುವುದಕ್ಕೂ ಮುಂಚಿನ ಏಳು ವರ್ಷಗಳ ಕಾಲ ಆ ವ್ಯಕ್ತಿಯು ಭಾರತದಲ್ಲಿ ಸಾಮಾನ್ಯ ನಿವಾಸಿಯಾಗಿದ್ದರೆ;

(ಡಿ) ಭಾರತದ ನಾಗರಿಕರ ಅಪ್ರಾಪ್ತ ವಯಸ್ಕ ಮಕ್ಕಳಾಗಿದ್ದರೆ;

(ಇ) ಪ್ರಾಪ್ತ ವಯಸ್ಕನಾದ ಅಥವಾ ಸಮರ್ಥನಾದ ಯಾವ ಆ ವ್ಯಕ್ತಿಯ ತಂದೆ–ತಾಯಿಯು ಈ ಉಪಪ್ರಕರಣದ (ಎ) ಖಂಡದ ಮೇರೆಗೆ ಅಥವಾ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭಾರತದ ನಾಗರಿಕರೆಂದು ನೋಂದಾಯಿತರಾಗಿದ್ದರೆ;

(ಎಫ್) ಪ್ರಾಪ್ತ ವಯಸ್ಕನಾದ ಹಾಗೂ ಸಮರ್ಥನಾದ ಯಾವ ಆ ವ್ಯಕ್ತಿಯು ಅಥವಾ ಆ ವ್ಯಕ್ತಿಯ ತಂದೆ–ತಾಯಿಯು ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕೂ ಮುಂಚಿನ

ನಿಕಟ ಹನ್ನೆರಡು ತಿಂಗಳುಗಳ ಕಾಲ ಭಾರತದಲ್ಲಿ ಸಾಮಾನ್ಯ ನಿವಾಸಿಯಾಗಿದ್ದ ಅಥವಾ ನಿವಾಸಿಗಳಾಗಿದ್ದರೆ;

(ಜಿ) ಪ್ರಾಪ್ತ ವಯಸ್ಕನಾದ ಹಾಗೂ ಸಮರ್ಥನಾದ ವ್ಯಕ್ತಿಯು ಐದು ವರ್ಷಗಳ ಕಾಲ ಭಾರತದ ಸಾಗರೋತ್ತರ ನಾಗರಿಕನಾಗಿ ನೋಂದಾಯಿತನಾಗಿದ್ದರೆ ಹಾಗೂ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕೂ ಮುಂಚಿನ ಹನ್ನೆರಡು ತಿಂಗಳುಗಳ ಕಾಲ ಭಾರತದಲ್ಲಿ ಸಾಮಾನ್ಯ ನಿವಾಸಿಯಾಗಿದ್ದರೆ

– ಆ ವ್ಯಕ್ತಿಯನ್ನು ಈ ಪ್ರಕರಣದ ಉಪಬಂಧಗಳಿಗೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಭಾರತದ ನಾಗರಿಕನೆಂದು ನೋಂದಾಯಿಸಬಹುದು.

*ವಿವರಣೆ 1.*– (ಎ) ಮತ್ತು (ಸಿ) ಖಂಡಗಳ ಉದ್ದೇಶಗಳಿಗಾಗಿ ಅರ್ಜಿದಾರನನ್ನು,–

(i) ಅವನು ನೋಂದಣೆಗಾಗಿ ಅರ್ಜಿಯನ್ನು ಸಲ್ಲಿಸುವುದಕ್ಕೂ ಮುಂಚಿನ ನಿಕಟ ಹನ್ನೆರಡು ತಿಂಗಳುಗಳ ಕಾಲ ಭಾರತದಲ್ಲಿ ವಾಸಿಸಿದ್ದರೆ; ಮತ್ತು

(ii) ಅವನ ಸದರಿ ಹನ್ನೆರಡು ತಿಂಗಳುಗಳ ಕಾಲದ ನಿಕಟ ಎಂಟು ವರ್ಷಗಳಲ್ಲಿ ಆರು ವರ್ಷಗಳಿಗಿಂತಲೂ ಕಡಿಮೆಯಲ್ಲದ ಅವಧಿಯವರೆಗೆ ಭಾರತದಲ್ಲಿ ವಾಸಿಸಿದ್ದರೆ

- ಭಾರತದಲ್ಲಿನ ಸಾಮಾನ್ಯ ನಿವಾಸಿಯೆಂದು ಪರಿಭಾವಿಸತಕ್ಕದ್ದು.

*ವಿವರಣೆ 2.*– ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಆ ವ್ಯಕ್ತಿಯು ಭಾರತೀಯ ಮೂಲದವನಾಗಿದ್ದರೆ ಅಥವಾ ಅವನ ತಂದೆ ತಾಯಿಯಾಗಲಿ, 15ನೇ ಆಗಸ್ಟ್, 1947ರ ನಂತರ ಭಾರತದ ಯಾವುದೇ ಭಾಗದ ವಿಭಜಿತವಲ್ಲದ ಭಾರತ ಅಥವಾ ಅಂಥ ಇತರೇ ಪ್ರದೇಶದಲ್ಲಿ ಜನಿಸಿದ್ದಾರೆಂದು ಪರಿಭಾವಿಸತಕ್ಕದ್ದು.

(1ಎ) ವಿಶೇಷ ಸಂದರ್ಭ ಸನ್ನಿವೇಶಗಳಿಯೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಲಿಖಿತದಲ್ಲಿ ಸಂದರ್ಭಗಳನ್ನು ದಾಖಲಿಸಿದ ತರುವಾಯ (ಎಫ್) ಮತ್ತು (ಜಿ) ಖಂಡಗಳು ಹಾಗೂ (1)ನೇ ಉಪಪ್ರಕರಣದ ವಿವರಣೆ 1ರ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಹನ್ನೆರಡು ತಿಂಗಳುಗಳ ಅವಧಿಯ ವಿನಾಯಿತಿಯನ್ನು ನೀಡಬಹುದಾಗಿದ್ದು, ಬೇರೆಬೇರೆ ಸಂದರ್ಭಗಳಲ್ಲಿ ಗರಿಷ್ಠ ಮೂವತ್ತು ದಿನಗಳವರೆಗೆ ವ್ಯತ್ಯಾಸವಾಗಬಹುದು.

(2) ಯಾರೇ ಪೂರ್ಣ ವಯಸ್ಸಿನವನಾಗಿರುವ ವ್ಯಕ್ತಿಯನ್ನು, ಅವನು, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ನಿಷ್ಠಾ ಪ್ರಮಾಣವಚನವನ್ನು ತೆಗೆದುಕೊಳ್ಳುವವರೆಗೆ (1)ನೇ ಉಪಪ್ರಕರಣದ ಮೇರೆಗೆ ಭಾರತದ ನಾಗರಿಕನೆಂದು ನೋಂದಾಯಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗೆ ತನ್ನ ಭಾರತದ ನಾಗರಿಕತ್ವವನ್ನು ಪರಿತ್ಯಜಿಸಿದ ಅಥವಾ ಅದರಿಂದ ವಂಚಿತನಾದ ಅಥವಾ ಭಾರತದ ನಾಗರಿಕತ್ವವು ಕೊನೆಗೊಂಡ ಯಾರೇ ವ್ಯಕ್ತಿಯನ್ನು ಕೇಂದ್ರ ಸರ್ಕಾರದ ಆದೇಶದ ಮೂಲಕ ಹೊರತು, (1)ನೇ ಉಪಪ್ರಕರಣದ ಮೇರೆಗೆ ಭಾರತದ ನಾಗರಿಕನೆಂದು ನೋಂದಾಯಿಸತಕ್ಕದ್ದಲ್ಲ.

(4) ಕೇಂದ್ರ ಸರ್ಕಾರಕ್ಕೆ, ಅಂಥ ನೋಂದಣಿಯನ್ನು ಸಮರ್ಥಿಸುವ ವಿಶೇಷ ಸನ್ನಿವೇಶಗಳಿವೆಯೆಂದು ಮನದಟ್ಟಾದರೆ ಅದು ಯಾರೇ ಅಪ್ರಾಪ್ತ ವಯಸ್ಕನನ್ನು ಭಾರತದ ನಾಗರಿಕನೆಂದು ನೋಂದಾಯಿಸುವಂತೆ ಮಾಡಬಹುದು.

(5) ಈ ಪ್ರಕರಣದ ಮೇರೆಗೆ ನೋಂದಾಯಿತನಾದ ವ್ಯಕ್ತಿಯು, ಅವನು, ಹಾಗೆ ನೋಂದಾಯಿತನಾದ ದಿನಾಂಕದಿಂದ ನೋಂದಣಿಯ ಮೂಲಕ ಭಾರತದ ನಾಗರಿಕನಾಗತಕ್ಕದ್ದು; ಮತ್ತು ಸಂವಿಧಾನದ 6ನೇ ಅನುಚ್ಛೇದದ (ಬಿ)(ii)ನೇ ಖಂಡದ ಅಥವಾ 8ನೇ ಅನುಚ್ಛೇದದ ಉಪಬಂಧಗಳ ಮೇರೆಗೆ ನೋಂದಾಯಿತನಾದ ವ್ಯಕ್ತಿಯನ್ನು ಸಂವಿಧಾನ ಪ್ರಾರಂಭದಂದಿನಿಂದ ಅಥವಾ ಅವನು ಹಾಗೆ ನೋಂದಾಯಿತನಾದ ದಿನಾಂಕ ಇವೆರಡರಲ್ಲಿ ಯಾವುದು ಅನಂತರದ್ದೋ ಅಂದಿನಿಂದ ನೋಂದಣಿಯ ಮೂಲಕ ಭಾರತದ ನಾಗರಿಕನೆಂದು ಭಾವಿಸತಕ್ಕದ್ದು.

(6) ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗಿನ ನಿವಾಸದ ನಿಬಂಧನೆಯಿಂದ ವಿನಾಯಿತಿ ನೀಡುವುದು ಅವಶ್ಯಕವೆನಿಸುವಂಥ ಸಂದರ್ಭ ಸನ್ನಿವೇಶಗಳಿವೆಯೆಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಅಂಥ ವಿನಾಯಿತಿಯನ್ನು ಕೊಡಬಹುದು.

**6. ದೇಶೀಕರಣದ ಮೂಲಕ ನಾಗರಿಕತ್ವ.–** (1) ಪೂರ್ಣ ವಯಸ್ಸು ಮತ್ತು ಕಾನೂನುಬಾಹಿರ ವಲಸಿಗನಲ್ಲದ ಸಾಮರ್ಥ್ಯವುಳ್ಳ, ಯಾರೇ ವ್ಯಕ್ತಿಯು ತನಗೆ ದೇಶೀಕರಣ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ನಿಯಮಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವಲ್ಲಿ, ಕೇಂದ್ರ ಸರ್ಕಾರವು, ಅರ್ಜಿದಾರನು, ಮೂರನೇ

ಅನುಸೂಚಿಯ ಉಪಬಂಧಗಳ ಮೇರೆಗೆ ದೇಶೀಕರಣಕ್ಕೆ ಅರ್ಹನೆಂದು ಅದಕ್ಕೆ ಮನದಟ್ಟಾದರೆ, ದೇಶೀಕರಣ ಪ್ರಮಾಣಪತ್ರವನ್ನು ಅವನಿಗೆ ನೀಡಬಹುದು:

ಪರಂತು, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಅರ್ಜಿದಾರನು ವಿಜ್ಞಾನ, ತತ್ವಶಾಸ್ತ್ರ, ಕಲೆ, ಸಾಹಿತ್ಯ, ವಿಶ್ವಶಾಂತಿ ಅಥವಾ ಸಾಮಾನ್ಯವಾಗಿ ಮಾನವ ಪ್ರಗತಿಗಾಗಿ ವಿಶಿಷ್ಟ ಸೇವೆಯನ್ನು ಸಲ್ಲಿಸಿದ ವ್ಯಕ್ತಿಯಾಗಿದ್ದರೆ, ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಷರತ್ತುಗಳನ್ನು ಬಿಟ್ಟುಕೊಡಬಹುದು.

(2) ಉಪಪ್ರಕರಣ (1)ರ ಮೇರೆಗೆ ದೇಶೀಕರಣದ ಪ್ರಮಾಣಪತ್ರವನ್ನು ನೀಡಲಾಗಿರುವ ಯಾರೇ ವ್ಯಕ್ತಿಯು, ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ನಿಷ್ಠಾ ಪ್ರಮಾಣವಚನವನ್ನು ಸ್ವೀಕರಿಸಿದ ಮೇಲೆ ಆ ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ದೇಶೀಕರಣದ ಮೂಲಕ ಭಾರತದ ನಾಗರಿಕನಾಗತಕ್ಕದ್ದು.

**6ಎ. ಅಸ್ಸಾಂ ಒಡಂಬಡಿಕೆಯಲ್ಲಿ ಒಳಗೊಂಡ ವ್ಯಕ್ತಿಗಳ ನಾಗರಿಕತ್ವದ ಬಗ್ಗೆ ವಿಶೇಷ ಉಪಬಂಧಗಳು.–** (1) ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಅಸ್ಸಾಂ" ಎಂದರೆ, ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985 (1985ರ 65)ರ ಪ್ರಾರಂಭದ ನಿಕಟಪೂರ್ವದಲ್ಲಿ ಅಸ್ಸಾಂ ರಾಜ್ಯದಲ್ಲಿ ಒಳಗೊಂಡ ರಾಜ್ಯ ಕ್ಷೇತ್ರಗಳು;

(ಬಿ) "ವಿದೇಶೀಯನಾಗಿರುವುದಾಗಿ ಪತ್ತೆ ಹಚ್ಚಲಾದ" ಎಂದರೆ, ವಿದೇಶೀಯರ ಅಧಿನಿಯಮ, 1946 (1946ರ 31)ರ ಮತ್ತು ವಿದೇಶೀಯರ (ನ್ಯಾಯಾಧಿಕರಣಗಳ) ಆದೇಶ, 1946ರ ಉಪಬಂಧಗಳಿಗನುಸಾರವಾಗಿ ಸದರಿ ಆದೇಶದ ಮೇರೆಗೆ ರಚಿತವಾದ ನ್ಯಾಯಾಧಿಕರಣದಿಂದ ವಿದೇಶೀಯನೆಂಬುದಾಗಿ ಪತ್ತೆ ಹಚ್ಚಲಾದವನು;

(ಸಿ) "ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರ" ಎಂದರೆ, ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985 (1985ರ 65)ರ ಪ್ರಾರಂಭದ ನಿಕಟಪೂರ್ವದಲ್ಲಿ ಬಾಂಗ್ಲಾದೇಶದಲ್ಲಿ ಒಳಗೊಂಡಿದ್ದ ರಾಜ್ಯ ಕ್ಷೇತ್ರಗಳು;

(ಡಿ) ವ್ಯಕ್ತಿಯನ್ನು, ಅವನಾಗಲಿ ಅಥವಾ ಅವನ ತಾಯಿ/ತಂದೆಗಳಲ್ಲಿ ಯಾರಾದರಾಗಲಿ ಅಥವಾ ಅವನ ತಾತ/ಅಜ್ಜಿ ಯಾರೇ ಆಗಲಿ ಅವಿಭಾಜ್ಯ ಭಾರತದಲ್ಲಿ ಹುಟ್ಟಿದ್ದರೆ ಭಾರತೀಯ ಮೂಲದವನೆಂಬುದಾಗಿ ಭಾವಿಸತಕ್ಕದ್ದು;

(ಇ) ವ್ಯಕ್ತಿಯನ್ನು ಯಾವ ದಿನಾಂಕದಂದು ವಿದೇಶೀಯರ (ನ್ಯಾಯಾಧಿಕರಣಗಳು) ಆದೇಶ, 1964ರ ಮೇರೆಗೆ ರಚಿಸಲಾದ ನ್ಯಾಯಾಧಿಕರಣವು, ಅವನು ಸಂಬಂಧಪಟ್ಟ ಅಧಿಕಾರಿ ಅಥವಾ ಪ್ರಾಧಿಕಾರಿಗೆ ಅವನು ವಿದೇಶೀಯನೆಂದು ತನ್ನ ಅಭಿಪ್ರಾಯವನ್ನು ಒಪ್ಪಿಸುವುದೋ ಆ ದಿನಾಂಕದಂದು ವಿದೇಶೀಯನೆಂದು ಪತ್ತೆ ಹಚ್ಚಿರುವುದಾಗಿ ಭಾವಿಸತಕ್ಕದ್ದು.

(2) (6)ನೇ ಮತ್ತು (7)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾರು 1ನೇ ಜನವರಿ 1966ಕ್ಕೆ ಮುಂಚೆ, ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರದಿಂದ (1967ರಲ್ಲಿ ನಡೆದ ಲೋಕಸಭೆಯ ಸಾರ್ವತ್ರಿಕ ಚುನಾವಣೆಯ ಉದ್ದೇಶಗಳಿಗಾಗಿ ಉಪಯೋಗಿಸಲಾದ ಮತದಾರರ ಪಟ್ಟಿಗಳಲ್ಲಿ ಸೇರ್ಪಡೆಯಾಗಿದ್ದಂಥವರ ಹೆಸರುಗಳನ್ನು ಒಳಗೊಂಡು) ಅಸ್ಸಾಂಗೆ ಬಂದರೋ ಮತ್ತು ಅಸ್ಸಾಂನೊಳಗೆ ಪ್ರವೇಶಿಸಿದ ದಿನಾಂಕಗಳಿಂದ ಅಸ್ಸಾಂನಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವರೋ ಆ ಭಾರತೀಯ ಮೂಲದ ಎಲ್ಲಾ ವ್ಯಕ್ತಿಗಳು.

(3) (6) ಮತ್ತು (7)ನೇ ಉಪಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು,–

(ಎ) ನಿರ್ದಿಷ್ಟಪಡಿಸಿದ ರಾಜ್ಯಕ್ಷೇತ್ರದಿಂದ 1ನೇ ಜನವರಿ 1966ರಂದು ಅಥವಾ ತರುವಾಯ ಆದರೆ 25ನೇ ಮಾರ್ಚ್ 1971ರ ದಿನಾಂಕಕ್ಕೂ ಮುಂಚೆ ಅಸ್ಸಾಂಗೆ ಬಂದಿರುವ; ಮತ್ತು

(ಬಿ) ಅಸ್ಸಾಂನೊಳಗೆ ಅವನ ಪ್ರವೇಶವಾದ ದಿನಾಂಕದಿಂದ ಅಸ್ಸಾಂನಲ್ಲಿ ಸಾಮಾನ್ಯವಾಗಿ ನಿವಾಸಿಯಾಗಿರುವ; ಮತ್ತು

(ಸಿ) ವಿದೇಶೀಯನೆಂದು ಪತ್ತೆ ಹಚ್ಚಲಾಗಿರುವ ಭಾರತೀಯ ಮೂಲದ ಪ್ರತಿಯೊಬ್ಬ ವ್ಯಕ್ತಿಯು 18ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳಿಗೆ ಅನುಸಾರವಾಗಿ ಅಂಥ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಯಲ್ಲಿ (ಈ ಉಪಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ನೋಂದಾಯಿಸುವ ಪ್ರಾಧಿಕಾರಿಯೆಂದು ಉಲ್ಲೇಖಿಸಲಾಗಿದೆ) ತನ್ನನ್ನು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಅಂಥ ಪತ್ತೆ ಹಚ್ಚಿದ ದಿನಾಂಕದಂದು ಜಾರಿಯಲ್ಲಿರುವ ಯಾವುದೇ ವಿಧಾನಸಭೆ ಅಥವಾ ಸಂಸದೀಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವನ ಹೆಸರನ್ನು ಸೇರಿಸಲಾಗಿದ್ದರೆ ಅದರಿಂದ ಅವನ ಹೆಸರನ್ನು ತೆಗೆದುಹಾಕತಕ್ಕದ್ದು.

ವಿವರಣೆ.– ಈ ಉಪಪ್ರಕರಣದ ಮೇರೆಗೆ ನೋಂದಣಿಗಾಗಿ ಕೋರುವ ಪ್ರತಿಯೊಬ್ಬ ವ್ಯಕ್ತಿಯ ಸಂದರ್ಭದಲ್ಲಿ, ವಿದೇಶೀಯರ (ನ್ಯಾಯಾಧಿಕರಣಗಳು) ಆದೇಶ, 1964ರ ಮೇರೆಗೆ ರಚಿತವಾದ

ನ್ಯಾಯಾಧಿಕರಣವು ಅಂಥ ವ್ಯಕ್ತಿಯು ವಿದೇಶಿಯನಾಗಿರುವನೆಂದು ಎತ್ತಿ ಹಿಡಿಯುವ ಅಭಿಪ್ರಾಯವನ್ನು ಈ ಉಪಪ್ರಕರಣದ (ಸಿ) ಖಂಡದ ಮೇರೆಗೆ ಅಗತ್ಯತೆಯ ಸಾಕಷ್ಟು ರುಜುವಾತೆಂಬುದಾಗಿ ಭಾವಿಸತಕ್ಕದ್ದು. ಈ ಉಪಪ್ರಕರಣದ ಮೇರೆಗೆ ಯಾವುದೇ ಇತರ ಅಗತ್ಯತೆಯನ್ನು ಅಂಥ ವ್ಯಕ್ತಿಯು ಪಾಲಿಸಿರುವನೋ ಹೇಗೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ನೋಂದಾಯಿಸುವ ಪ್ರಾಧಿಕಾರಿಯು,–

(i) ಅಂಥ ಇತರ ಅಗತ್ಯತೆಯ ಬಗ್ಗೆ ಅಂಥ ಅಭಿಪ್ರಾಯವು ಒಂದು ನಿರ್ಣಯವನ್ನು ಒಳಗೊಂಡಿದ್ದರೆ, ಅಂಥ ನಿರ್ಣಯಕ್ಕನುಗುಣವಾಗಿ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು;

(ii) ಅಂಥ ಇತರ ಅಗತ್ಯತೆಯ ಬಗ್ಗೆ ಅಂಥ ಅಭಿಪ್ರಾಯವು ಒಂದು ನಿರ್ಣಯವನ್ನು ಒಳಗೊಂಡಿಲ್ಲದಿದ್ದರೆ, 18ನೇ ಪ್ರಕರಣದ ಮೇರೆಗೆ ಈ ಬಗ್ಗೆ ಕೇಂದ್ರ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗನುಸಾರವಾಗಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಸದರಿ ಆದೇಶದ ಮೇರೆಗೆ ರಚಿಸಿದ ನ್ಯಾಯಾಧಿಕರಣಕ್ಕೆ ಆ ಪ್ರಶ್ನೆಯನ್ನು ಒಪ್ಪಿಸತಕ್ಕದ್ದು ಮತ್ತು ಅಂಥ ಒಪ್ಪಿಸುವಿಕೆಯ ಬಗ್ಗೆ ಸ್ವೀಕರಿಸಲಾದ ಅಭಿಪ್ರಾಯಕ್ಕನುಗುಣವಾಗಿ ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು.

(4) ಉಪಪ್ರಕರಣ (3)ರ ಮೇರೆಗೆ ನೋಂದಾಯಿತನಾದ ವ್ಯಕ್ತಿಯು, ಯಾವ ದಿನಾಂಕದಂದು ಅವನನ್ನು ವಿದೇಶೀಯನೆಂಬುದಾಗಿ ಪತ್ತೆ ಹಚ್ಚಲಾಯಿತೋ ಆ ದಿನಾಂಕದಿಂದ ಮತ್ತು ಆ ದಿನಾಂಕದಿಂದ ಹತ್ತು ವರ್ಷಗಳ ಅವಧಿಯು ಮುಕ್ತಾಯವಾಗುವವರೆಗೆ, ಭಾರತದ ನಾಗರಿಕನಾಗಿ ಅವೇ ಹಕ್ಕುಗಳು ಮತ್ತು ಬಾಧ್ಯತೆಗಳ (ಪಾಸ್‌ಪೋರ್ಟ್ ಅಧಿನಿಯಮ, 1967 (1967ರ 15)ರ ಮೇರೆಗೆ ಪಾಸ್‌ಪೋರ್ಟನ್ನು ಪಡೆಯುವ ಹಕ್ಕು) ಮತ್ತು ಅದಕ್ಕೆ ಸಂಬಂಧಿಸಿದ ಬಾಧ್ಯತೆಗಳನ್ನು ಒಳಗೊಂಡು) ಹೊಂದಿರತಕ್ಕದ್ದು, ಆದರೆ ಸದರಿ ಹತ್ತು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಯಾವುದೇ ವಿಧಾನಸಭೆ ಅಥವಾ ಸಂಸದೀಯ ಚುನಾವಣಾ ಕ್ಷೇತ್ರಕ್ಕಾಗಿನ ಯಾವುದೇ ಮತದಾರರ ಪಟ್ಟಿಯಲ್ಲಿ ಅವನ ಹೆಸರನ್ನು ಸೇರಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(5) ಉಪಪ್ರಕರಣ (3)ರ ಮೇರೆಗೆ ನೋಂದಾಯಿತನಾದ ವ್ಯಕ್ತಿಯನ್ನು ಅವನನ್ನು ವಿದೇಶೀಯನೆಂದು ಪತ್ತೆ ಹಚ್ಚಲಾದಂಥ ದಿನಾಂಕದಿಂದ ಹತ್ತು ವರ್ಷಗಳ ಅವಧಿಯು ಮುಕ್ತಾಯವಾಗುವ ದಿನಾಂಕದಿಂದ ಎಲ್ಲಾ ಉದ್ದೇಶಗಳಿಗಾಗಿ ಭಾರತದ ನಾಗರಿಕನೆಂಬುದಾಗಿ ಭಾವಿಸತಕ್ಕದ್ದು.

(6) 8ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ,–

(ಎ) ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985 (1985ರ 65)ರ ಪ್ರಾರಂಭದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಭಾರತದ ನಾಗರಿಕನಾಗಿರಲು ಅವನು ಇಚ್ಛಿಸುವುದಿಲ್ಲವೆಂದು ಒಂದು ಘೋಷಣೆಯನ್ನು, ನಿಯಮಿಸಿದ ರೀತಿ ಮತ್ತು ನಮೂನೆಯಲ್ಲಿ ಮತ್ತು ನಿಯಮಿಸಿದ ಪ್ರಾಧಿಕಾರಿಗೆ ಒಪ್ಪಿಸಿದರೆ, ಅಂಥ ವ್ಯಕ್ತಿಯನ್ನು ಆ ಉಪಪ್ರಕರಣದ ಮೇರೆಗೆ ಭಾರತದ ನಾಗರಿಕನಾಗಿರುವುದಾಗಿ ಭಾವಿಸತಕ್ಕದ್ದಲ್ಲ;

(ಬಿ) ಉಪಪ್ರಕರಣ (3)ರಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985 (1985ರ 65)ರ ಪ್ರಾರಂಭದ ದಿನಾಂಕದಿಂದ ಅರವತ್ತು ದಿವಸಗಳ ಒಳಗಾಗಿ ಅಥವಾ ಅವನನ್ನು ವಿದೇಶೀಯನೆಂದು ಪತ್ತೆ ಹಚ್ಚಲಾದಂಥ ದಿನಾಂಕದಿಂದ ಇದರಲ್ಲಿ ಯಾವುದು ತರುವಾಯವೋ ಆ ದಿನಾಂಕದಿಂದ ಆ ಉಪಪ್ರಕರಣ ಮತ್ತು (4) ಮತ್ತು (5)ನೇ ಉಪಪ್ರಕರಣಗಳ ಉಪಬಂಧಗಳಿಗೆ ಅವನು ಒಳಪಡಲು ಇಚ್ಛಿಸುವುದಿಲ್ಲವೆಂದು ಒಂದು ಘೋಷಣೆಯನ್ನು ನಿಯಮಿಸಿದ ರೀತಿ ಮತ್ತು ನಮೂನೆಯಲ್ಲಿ ಮತ್ತು ನಿಯಮಿಸಿದ ಪ್ರಾಧಿಕಾರಿಗೆ ಒಪ್ಪಿಸಿದರೆ (3)ನೇ ಉಪಪ್ರಕರಣದ ಮೇರೆಗೆ ಅಂಥ ವ್ಯಕ್ತಿಯು ತನ್ನನ್ನು ನೋಂದಾಯಿಸಿಕೊಳ್ಳುವುದು ಅವಶ್ಯವಾಗಿರತಕ್ಕದ್ದಲ್ಲ.

ವಿವರಣೆ.– ಈ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಸಲ್ಲಿಸಲು ಅಗತ್ಯಪಡಿಸಲಾದ ವ್ಯಕ್ತಿಯು, ಕರಾರನ್ನು ಮಾಡಿಕೊಳ್ಳಲು ಸಾಮರ್ಥ್ಯವನ್ನು ಹೊಂದಿಲ್ಲದೆ ಇರುವಲ್ಲಿ ಅಂಥ ಘೋಷಣೆಯನ್ನು ಅವನ ಪರವಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅವನ ಪರವಾಗಿ ಕಾರ್ಯನಿರ್ವಹಿಸಲು ಸಕ್ಷಮನಾಗಿರುವ ಯಾರೇ ವ್ಯಕ್ತಿಯು ದಾಖಲ್ಮಾಡಬಹುದು.

(7) (2)ರಿಂದ (6)ನೇ ಉಪಪ್ರಕರಣಗಳಲ್ಲಿ ಇರುವುದಾವುದೂ,–

(ಎ) ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985 (1985ರ 65)ರ ಪ್ರಾರಂಭದ ನಿಕಟಪೂರ್ವದಲ್ಲಿ ಭಾರತದ ನಾಗರಿಕನಾಗಿರುವ;

(ಬಿ) ವಿದೇಶೀಯರ ಅಧಿನಿಯಮ, 1946 (1946ರ 31)ರ ಮೇರೆಗೆ ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 1985ರ ಪ್ರಾರಂಭದ ಮುಂಚೆ ಭಾರತದಿಂದ ಹೊರ ಹಾಕಲಾದ ಯಾರೇ ವ್ಯಕ್ತಿಗೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದಲ್ಲ.

(8) ಈ ಪ್ರಕರಣದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದಂತೆ ಹೊರತು, ಈ ಪ್ರಕರಣದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪರಿಣಾಮವುಳ್ಳದ್ದಾಗಿರತಕ್ಕದ್ದು.

**6ಬಿ. ಪ್ರಕರಣ 2ರ ಉಪಪ್ರಕರಣ (1)ರ (ಬಿ) ಖಂಡದ ಪರಂತುಕವು ಅನ್ವಯವಾಗುವ ವ್ಯಕ್ತಿಯು ನಾಗರಿಕತ್ವಕ್ಕೆ ಸಂಬಂಧಿಸಿದ ವಿಶೇಷ ಉಪಬಂಧಗಳು.–** (1) ಈ ಬಗ್ಗೆ ಅರ್ಜಿಯನ್ನು ಸಲ್ಲಿಸಿದಾಗ, ಕೇಂದ್ರ ಸರ್ಕಾರವು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರವು, ನಿಯಮಿಸಬಹುದಾದಂಥ ಷರತ್ತುಗಳಿಗೆ, ನಿರ್ಬಂಧಗಳಿಗೆ ಮತ್ತು ರೀತಿಗೆ ಒಳಪಟ್ಟು, 2ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡಗಳಿರುವ ಪರಂತುಕದಲ್ಲಿ ಹೇಳಿರುವ ವ್ಯಕ್ತಿಗೆ ನೋಂದಣಿ ಪ್ರಮಾಣಪತ್ರವನ್ನು ಅಥವಾ ಪ್ರಜಾ ಹಕ್ಕು ನೀಡಿಕೆ ಪ್ರಮಾಣಪತ್ರವನ್ನು ಪ್ರದಾನ ಮಾಡಬಹುದು.

(2) ಪ್ರಕರಣ 5ರಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳ ಈಡೇರಿಕೆಗೆ ಒಳಪಡುವ ಅಥವಾ ಮೂರನೇ ಅನುಸೂಚಿಯಲ್ಲಿ ಹೇಳಿರುವ ಅರ್ಹತೆ ಬಗ್ಗೆ ನಾಗರಿಕತ್ವ ಹಕ್ಕಿಗೆ ಸಂಬಂಧಿಸಿದ ಅರ್ಹತೆಗಳ ಈಡೇರಿಕೆಗೆ ಒಳಪಟ್ಟು ಯಾವ ವ್ಯಕ್ತಿಗೆ (1)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ಅಥವಾ ನಾಗರಿಕತ್ವ ಹಕ್ಕಿನ ಪ್ರಮಾಣಪತ್ರವನ್ನು ಪ್ರದಾನ ಮಾಡಲಾಗಿದೆಯೋ ಆ ವ್ಯಕ್ತಿಯನ್ನು ಭಾರತದ ಒಳಗಡೆಗೆ ಅದನ್ನು ಪ್ರವೇಶಿಸಿದ ದಿನಾಂಕದಿಂದ ಭಾರತದ ನಾಗರಿಕನೆಂದು ಪರಿಗಣಿಸತಕ್ಕದ್ದು.

(3) ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2019 ಪ್ರಾರಂಭವಾದ ದಿನಾಂಕದಂದು ಅಥವಾ ಅಂದಿನಿಂದ ಕಾನೂನುಬಾಹಿರ ವಲಸೆಗೆ ಅಥವಾ ನಾಗರಿಕತ್ವಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿರುವ ಯಾವುದೇ ವ್ಯವಹರಣೆಯು ಅವನಿಗೆ ನಾಗರಿಕತ್ವವನ್ನು ಪ್ರದಾನ ಮಾಡಿದಾಗ ರದ್ದಾಗತಕ್ಕದ್ದು (ನಿಂತುಹೋಗತಕ್ಕದ್ದು):

ಪರಂತು, ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ವ್ಯವಹರಣೆಯು ಇತ್ಯರ್ಥದಲ್ಲಿದೆಯೆಂಬ ಆಧಾರದ ಮೇಲೆ ಅಂಥ ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ನಾಗರಿಕತ್ವಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಅನರ್ಹನನ್ನಾಗಿಸತಕ್ಕದ್ದಲ್ಲ ಮತ್ತು ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಿದ ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ನಾಗರಿಕತ್ವ ನೀಡಿಕೆಗಾಗಿ ಅಂಥ ವ್ಯಕ್ತಿಯು ಅನ್ಯಥಾ ಅರ್ಹನಿದ್ದಾನೆಂದು ಕಂಡುಬಂದಿರುವುದರ ಆಧಾರದ ಮೇಲೆ ಅವನ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ನಾಗರಿಕತ್ವಕ್ಕಾಗಿ ಯಾವ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸುವನೋ, ಆ ವ್ಯಕ್ತಿಯನ್ನು, ಅವನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಂದು ಅವನು ಯಾವ ಹಕ್ಕುಗಳಿಗೆ ಮತ್ತು ಸವಲತ್ತುಗಳಿಗೆ ಹಕ್ಕುಳ್ಳವನಾಗಿದ್ದಾನೋ, ಆ ಹಕ್ಕುಗಳಿಂದ ಮತ್ತು ಸವಲತ್ತುಗಳಿಂದ ಅಂಥ ಅರ್ಜಿಯನ್ನು ಸಲ್ಲಿಸಿರುವ ಆಧಾರದ ಮೇಲೆ ವಂಚಿತವನ್ನಾಗಿಸತಕ್ಕದ್ದಲ್ಲ.

(4) ಈ ಪ್ರಕರಣದಲ್ಲಿ ಇರುವುದು ಯಾವುದೂ, ಸಂವಿಧಾನಕ್ಕಿರುವ ಆರನೆಯ ಅನುಸೂಚಿಯಲ್ಲಿ ಸೇರಿಸಿರುವ ಅಸ್ಸಾಂನ, ಮೇಘಾಲಯದ, ಮಿಜೋರಾಂನ ಅಥವಾ ತ್ರಿಪುರದ ಬುಡಕಟ್ಟು ಪ್ರದೇಶಕ್ಕೆ ಮತ್ತು ಬೆಂಗಾಲ್ ಈಸ್ಟರ್ನ್ ಫ್ರಾಂಟಿಯರ್ ರೆಗ್ಯುಲೇಷನ್, 1873 (1873ರ ವಿನಿಯಮ 5)ರ ಅಡಿಯಲ್ಲಿ ಅಧಿಸೂಚಿಸಿದ "ದಿ ಇನ್ನರ್ ಲೈನ್" ಗೆ ಒಳಪಡುವ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

7. **ರಾಜ್ಯಕ್ಷೇತ್ರದ ಸೇರ್ಪಡೆಯಿಂದಾಗಿ ನಾಗರಿಕತ್ವ.–** ಯಾವುದೇ ರಾಜ್ಯಕ್ಷೇತ್ರವು ಭಾರತದ ಒಂದು ಭಾಗವಾದರೆ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ, ಆ ರಾಜ್ಯಕ್ಷೇತ್ರದೊಂದಿಗೆ ಅವರ ಸಂಬಂಧದ ಕಾರಣದಿಂದಾಗಿ, ಯಾವ ವ್ಯಕ್ತಿಗಳು ಭಾರತದ ನಾಗರಿಕರಾಗತಕ್ಕದ್ದು ಎಂಬುದನ್ನು ನಿರ್ದಿಷ್ಟಪಡಿಸಬಹುದು ಮತ್ತು ಆ ವ್ಯಕ್ತಿಗಳು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಭಾರತದ ನಾಗರಿಕರಾಗತಕ್ಕದ್ದು.

## ಸಾಗರೋತ್ತರ ನಾಗರಿಕತ್ವ

**7ಎ. ಭಾರತದ ಸಾಗರೋತ್ತರ ನಾಗರಿಕರ ನೋಂದಣಿ.**– (1) ಕೇಂದ್ರ ಸರ್ಕಾರವು, ಯಾರೇ ವ್ಯಕ್ತಿಯು, ಈ ಬಗ್ಗೆ ಅರ್ಜಿ ಸಲ್ಲಿಸಿದಾಗ, ಆ ಯಾರೇ ವ್ಯಕ್ತಿಯನ್ನು,–

(ಎ) ಅವನು ಪೂರ್ಣ ವಯಸ್ಸಿನವನಾಗಿರುವ ಹಾಗೂ ಸಾಮರ್ಥ್ಯ ಉಳ್ಳವನಾಗಿರುವ ಆ ವ್ಯಕ್ತಿಯು,–

(i) ಸಂವಿಧಾನದ ಪ್ರಾರಂಭದ ಕಾಲದಲ್ಲಿ ಅಥವಾ ಆ ತರುವಾಯದ ಯಾವುದೇ ಕಾಲದಲ್ಲಿ ಇನ್ನೊಂದು ದೇಶದ ನಾಗರಿಕನಾಗಿದ್ದರೆ; ಅಥವಾ

(ii) ಸಂವಿಧಾನದ ಪ್ರಾರಂಭದ ಕಾಲದಲ್ಲಿ ಭಾರತದ ನಾಗರಿಕನಾಗಲು ಅರ್ಹತೆಯಿದ್ದು, ಇನ್ನೊಂದು ದೇಶದ ನಾಗರಿಕನಾಗಿದ್ದರೆ; ಅಥವಾ

(iii)1947ರ ಅಗಸ್ಟ್ 15ನೇ ದಿನದ ನಂತರ ಭಾರತದ ಭಾಗವಾದ ರಾಜ್ಯ ಕ್ಷೇತ್ರದವನಾಗಿದ್ದು, ಇನ್ನೊಂದು ದೇಶದ ನಾಗರಿಕನಾಗಿದ್ದರೆ; ಅಥವಾ

(iv) ಅಂಥ ನಾಗರಿಕನ ಮಗುವಾಗಿದ್ದರೆ ಅಥವಾ ಮೊಮ್ಮಗುವಾಗಿದ್ದರೆ ಅಥವಾ ದೊಡ್ಡ ಮೊಮ್ಮಗುವಾಗಿದ್ದರೆ; ಅಥವಾ

(ಬಿ) ಖಂಡ (ಎ)ಯಲ್ಲಿ ಹೇಳಿರುವ ವ್ಯಕ್ತಿಯು ಅಪ್ರಾಪ್ತ ವಯಸ್ಸಿನ ಮಗುವಾಗಿದ್ದರೆ; ಅಥವಾ

(ಸಿ) ವ್ಯಕ್ತಿಯು ಅಪ್ರಾಪ್ತ ವಯಸ್ಸಿನ ಮಗುವಾಗಿದ್ದರೆ ಮತ್ತು ಅವನ ತಂದೆ–ತಾಯಿ ಇಬ್ಬರೂ ಭಾರತದ ನಾಗರಿಕರಾಗಿದ್ದರೆ ಅಥವಾ ತಂದೆ–ತಾಯಿ ಇಬ್ಬರಲ್ಲಿ ಯಾರಾದರೂ ಒಬ್ಬರು ಭಾರತದ ನಾಗರಿಕರಾಗಿದ್ದರೆ; ಅಥವಾ

(ಡಿ) ಭಾರತ ನಾಗರಿಕತ್ವವನ್ನು ಹೊಂದಿರುವ ವಿದೇಶಿ ಮೂಲದ ಪತಿ ಪತ್ನಿಯಾಗಿದ್ದರೆ ಅಥವಾ 7ಎ ಪ್ರಕರಣದ ಮೇರೆಗೆ ನೋಂದಾಯಿತರಾದ ಭಾರತದ ಸಾಗರೋತ್ತರ ನಾಗರಿಕತ್ವವನ್ನು ಹೊಂದಿದ ವಿದೇಶಿ ಮೂಲದ ಪತಿ ಪತ್ನಿಯಾಗಿದ್ದರೆ ಮತ್ತು ವಿವಾಹವನ್ನು ನೋಂದಾಯಿಸಿರುವ ಮತ್ತು ಈ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿ ಪ್ರಮಾಣಪತ್ರವನ್ನು ಪ್ರದಾನ ಮಾಡುವ ಮೊದಲು ನಿಕಟ ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ನಿರಂತರ ಅವಧಿಗಾಗಿ ಅಸ್ತಿತ್ವದಲ್ಲಿರುವ ಭಾರತದಲ್ಲಿರುವ ವಿದೇಶಿ ನಾಗರಿಕರಾಗಿದ್ದರೆ

– ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಭಾರತದ ಸಾಗರೋತ್ತರ ನಾಗರಿಕನನ್ನಾಗಿ ನೋಂದಾಯಿಸಬಹುದು:

ಪರಂತು, ಭಾರತದ ಸಾಗರೋತ್ತರ ನಾಗರಿಕತ್ವದ ನೋಂದಣಿಯ ಅರ್ಹತೆಗಾಗಿ ಅಂಥ ಪತಿಪತ್ನಿಯು ಭಾರತದಲ್ಲಿನ ಸಕ್ಷಮ ಪ್ರಾಧಿಕಾರವು ನೀಡುವ ಭದ್ರತಾ ಪೂರ್ವ ಅನುಮತಿಗೆ ಒಳಪಡತಕ್ಕದ್ದು:

ಮತ್ತು ಪರಂತು, ಯಾವ ವ್ಯಕ್ತಿಯು, ಅವನ ತಂದೆ–ತಾಯಿಯಾಗಲೀ ಅಥವಾ ಅವನ ಅಜ್ಜ ಅಜ್ಜಿಯಾಗಲಿ ಅಥವಾ ಅವನ ಮುತ್ತಜ್ಜ ಮುತ್ತಜ್ಜಿಯಾಗಲಿ ಪಾಕಿಸ್ತಾನದ, ಬಾಂಗ್ಲಾದೇಶದ ಅಥವಾ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ದೇಶದ ನಾಗರಿಕನಾಗಿರುವನೋ ಅಥವಾ ನಾಗರಿಕನಾಗಿದ್ದನೋ ಅವನು ಈ ಉಪಪ್ರಕರಣದ ಮೇರೆಗೆ ಭಾರತದ ಸಾಗರೋತ್ತರ ನಾಗರಿಕನಾಗಿ ನೋಂದಣಿಯಾಗಲು ಅರ್ಹನಾಗಿರತಕ್ಕದ್ದು.

(2) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಸ್ತಿತ್ವದಲ್ಲಿರುವ ಭಾರತೀಯ ಮೂಲದ ವ್ಯಕ್ತಿಗಳನ್ನು ಭಾರತದ ಸಾಗರೋತ್ತರ ನಾಗರಿಕರೆಂಬುದಾಗಿ ಭಾವಿಸತಕ್ಕದ್ದು.

ವಿವರಣೆ.– ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಭಾರತೀಯ ಮೂಲದ ಕಾರ್ಡ್ ಹೊಲ್ಡರ್ ವ್ಯಕ್ತಿಗಳು" ಎಂದರೆ, ಈ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿದ ಅಂಥ ಸಂಖ್ಯೆ 26011/4/98 ಎಫ್.ಐ ದಿನಾಂಕ 19ನೇ ಆಗಸ್ಟ್, 2002ರ ಅಧಿಸೂಚನೆಯ ಅಡಿಯಲ್ಲಿ ನೋಂದಾಯಿಸಿದ ವ್ಯಕ್ತಿಗಳು.

(3) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು ವಿಶೇಷ ಸನ್ನಿವೇಶಗಳಿವೆ ಎಂಬುದಾಗಿ ಮನವರಿಕೆ ಮಾಡಿಕೊಂಡಿದ್ದರೆ, ಲಿಖಿತದಲ್ಲಿ ಅಂಥ ಸಂದರ್ಭಗಳನ್ನು ದಾಖಲಿಸಿದ ತರುವಾಯ, ಅಂಥ ವ್ಯಕ್ತಿಯು ಭಾರತದ ಕಾರ್ಡ್ ಹೊಲ್ಡರ್ ಸಾಗರೋತ್ತರ ನಾಗರಿಕನೆಂದು ನೋಂದಾಯಿಸಬಹುದು.

**7ಬಿ. ಭಾರತದ ಕಾರ್ಡ್ ಹೊಲ್ಡರ್ ಸಾಗರೋತ್ತರ ನಾಗರಿಕರಿಗೆ ಹಕ್ಕುಗಳ ಪ್ರದಾನ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಭಾರತದ ಸಾಗರೋತ್ತರ ನಾಗರಿಕನು, ಕೇಂದ್ರ ಸರ್ಕಾರವು ಈ ಬಗ್ಗೆ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಹಕ್ಕುಗಳಿಗೆ ಎಂದರೆ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಹಕ್ಕುಗಳಲ್ಲದ ಹಕ್ಕುಗಳಿಗೆ ಅರ್ಹನಾಗಿರತಕ್ಕದ್ದು.

(2) ಭಾರತದ ಸಾಗರೋತ್ತರ ನಾಗರಿಕನು, ಭಾರತದ ನಾಗರಿಕನಿಗೆ,–

(ಎ) ಸಾರ್ವಜನಿಕ ಉದ್ಯೋಗದ ವಿಷಯಗಳಲ್ಲಿ ಸಮಾನ ಅವಕಾಶಕ್ಕೆ ಸಂಬಂಧಪಟ್ಟಂತೆ ಸಂವಿಧಾನದ 16ನೇ ಅನುಚ್ಛೇದದಲ್ಲಿ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಬಿ) ರಾಷ್ಟ್ರಪತಿಯ ಚುನಾವಣೆಗೆ ಸಂಬಂಧಪಟ್ಟಂತೆ ಸಂವಿಧಾನದ 58ನೇ ಅನುಚ್ಛೇದದ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಸಿ) ಉಪ–ರಾಷ್ಟ್ರಪತಿ ಚುನಾವಣೆ ಸಂಬಂಧಪಟ್ಟಂತೆ ಸಂವಿಧಾನದ 66ನೇ ಅನುಚ್ಛೇದದ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಡಿ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಕ್ಕೆ ಸಂಬಂಧಪಟ್ಟಂತೆ ಸಂವಿಧಾನದ 124ನೇ ಅನುಚ್ಛೇದದ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಇ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿ ನೇಮಕಕ್ಕೆ ಸಂಬಂಧಪಟ್ಟಂತೆ 217ನೇ ಅನುಚ್ಛೇದದ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಎಫ್)ಮತದಾರನಾಗಿ ನೋಂದಣಿಯಾಗುವುದಕ್ಕೆ ಸಂಬಂಧಪಟ್ಟಂತೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ 43)ರ 16ನೇ ಪ್ರಕರಣದ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಜಿ) ಸಂದರ್ಭಾನುಸಾರ, ಲೋಕಸಭೆಯ ಅಥವಾ ರಾಜ್ಯಸಭೆಯ ಸದಸ್ಯನಾಗಲು ಇರಬೇಕಾದ ಅರ್ಹತೆಗೆ ಸಂಬಂಧಪಟ್ಟಂತೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43ರ) 3ನೇ ಮತ್ತು 4ನೇ ಪ್ರಕರಣಗಳ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಹೆಚ್) ಸಂದರ್ಭಾನುಸಾರ, ರಾಜ್ಯದ ವಿಧಾನಸಭೆಯ ಅಥವಾ ವಿಧಾನ ಪರಿಷತ್ತಿನ ಸದಸ್ಯನಾಗಲು ಇರಬೇಕಾದ ಅರ್ಹತೆಗೆ ಸಂಬಂಧಪಟ್ಟಂತೆ ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951ರ 43)ರ 5, 5ಎ ಮತ್ತು 6ನೇ ಪ್ರಕರಣಗಳ ಮೇರೆಗೆ ಪ್ರದಾನ ಮಾಡಿರುವ ಹಕ್ಕುಗಳಿಗೆ;

(ಐ) ಒಕ್ಕೂಟದ ಮತ್ತು ಯಾವುದೇ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಂತೆ ಇರುವ ಸಾರ್ವಜನಿಕ ಸೇವೆಗಳಿಗೆ ಮತ್ತು ಹುದ್ದೆಗಳ ಪೈಕಿ ಕೇಂದ್ರ ಸರ್ಕಾರವು ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸೇವೆಗಳಿಗೆ ಮತ್ತು ಹುದ್ದೆಗಳಿಗೆ ನೇಮಕದ ಹೊರತು ನೇಮಕಕ್ಕೆ ಪ್ರದಾನ ಮಾಡಿರುವ ಹಕ್ಕುಗಳಿಗೆ

– ಅರ್ಹನಾಗಿರತಕ್ಕದ್ದಲ್ಲ.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**7ಸಿ. ಸಾಗರೋತ್ತರ ನಾಗರಿಕತ್ವದ ಪರಿತ್ಯಾಗ.–** (1) ಪೂರ್ಣ ವಯಸ್ಸಿನ ಮತ್ತು ಸಾಮರ್ಥ್ಯವುಳ್ಳ ಯಾರೇ ಭಾರತದ ಸಾಗರೋತ್ತರ ನಾಗರಿಕನು, ಗೊತ್ತುಪಡಿಸಿದ ರೀತಿಯಲ್ಲಿ, ತನ್ನ ಭಾರತದ ಸಾಗರೋತ್ತರ ನಾಗರಿಕತ್ವವನ್ನು ಪರಿತ್ಯಾಗ ಮಾಡುವ ಘೋಷಣೆಯನ್ನು ಮಾಡಿದರೆ, ಆ ಘೋಷಣೆಯನ್ನು ಕೇಂದ್ರ

ಸರ್ಕಾರವು ನೋಂದಾಯಿಸತಕ್ಕದ್ದು ಮತ್ತು ಹಾಗೆ ನೋಂದಣಿಯಾದ ಮೇಲೆ, ಆ ವ್ಯಕ್ತಿಯು ಭಾರತದ ಸಾಗರೋತ್ತರ ನಾಗರಿಕನಾಗಿರುವುದು ನಿಂತುಹೋಗತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ, ವ್ಯಕ್ತಿಯ ಭಾರತ ಸಾಗರೋತ್ತರ ನಾಗರಿಕತ್ವವು ನಿಂತುಹೋದರೆ, ಆ ವ್ಯಕ್ತಿಯು ವಿದೇಶಿ ಮೂಲದ ಪತಿ ಪತ್ನಿಯಾಗಿದ್ದರೆ, 7ಎ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಭಾರತದ ಸಾಗರೋತ್ತರ ನಾಗರಿಕತ್ವವನ್ನು ಪಡೆದುಕೊಂಡಿದ್ದರೆ ಮತ್ತು ಭಾರತದ ಸಾಗರೋತ್ತರ ನಾಗರಿಕನೆಂದು ನೋಂದಾಯಿಸಿದ ಆ ವ್ಯಕ್ತಿಯ ಪ್ರತಿಯೊಂದು ಅಪ್ರಾಪ್ತ ವಯಸ್ಕ ಮಗುವಿದ್ದರೆ, ಅನಂತರ ಆ ಮಗುವು ಭಾರತದ ಸಾಗರೋತ್ತರ ನಾಗರಿಕನಾಗಿರುವುದು ನಿಂತುಹೋಗತಕ್ಕದ್ದು.

**7ಡಿ. ಭಾರತದ ಸಾಗರೋತ್ತರ ನಾಗರಿಕನ ನೋಂದಣಿಯ ರದ್ದಿಯಾತಿ.**– ಕೇಂದ್ರ ಸರ್ಕಾರಕ್ಕೆ,–

(ಎ) ಭಾರತದ ಸಾಗರೋತ್ತರ ನಾಗರಿಕನಾಗಿ ನೋಂದಣಿಯನ್ನು ಮೋಸದಿಂದ, ಸುಳ್ಳು ನಿರೂಪಣೆಯಿಂದ ಅಥವಾ ಯಾವುದೇ ಮಹತ್ವದ ಸಂಗತಿಯನ್ನು ಮರೆಮಾಚಿ ಪಡೆದುಕೊಳ್ಳಲಾಗಿದೆಯೆಂಬುದು; ಅಥವಾ

(ಬಿ) ಭಾರತದ ಸಾಗರೋತ್ತರ ನಾಗರಿಕನು, ಕಾನೂನು ಮೂಲಕ ಸ್ಥಾಪಿತವಾದ ಸಂವಿಧಾನಕ್ಕೆ ನಿಷ್ಠೆ ತೋರಿಲ್ಲವೆಂಬುದು; ಅಥವಾ

(ಸಿ) ಭಾರತದ ಸಾಗರೋತ್ತರ ನಾಗರಿಕನು, ಯಾವ ಯುದ್ಧದಲ್ಲಿ ತೊಡಗಿಸಬಹುದಾಗಿದೆಯೋ ಆ ಯಾವುದೇ ಯುದ್ಧದ ಕಾಲದಲ್ಲಿ ಶತ್ರುವಿನೊಂದಿಗೆ ಕಾನೂನುಬಾಹಿರವಾಗಿ ವ್ಯಾಪಾರ ನಡೆಸಿದ್ದಾನೆಂದು ಅಥವಾ ಸಂಪರ್ಕದಲ್ಲಿದ್ದಾನೆಂಬುದು ಅಥವಾ ಸಹವರ್ತಿಯಾಗಿದ್ದಾನೆಂಬುದು ಅವನ ತಿಳುವಳಿಕೆಗೆ ಬಂದಿರ್ತೋ ಅದರಲ್ಲಿ ತೊಡಗಿದ್ದಾನೆಂಬುದು ಅಥವಾ ಸಹವರ್ತಿಯಾಗಿದ್ದಾನೆಂಬುದು; ಅಥವಾ

(ಡಿ) ಭಾರತದ ಸಾಗರೋತ್ತರ ನಾಗರಿಕನು, 7ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಂದಣಿಯನ್ನು ನಂತರದ ಐದು ವರ್ಷಗಳ ಒಳಗೆ ಎರಡು ವರ್ಷಗಳಿಗಿಂತಲೂ ಕಡಿಮೆಯಲ್ಲದ ಅವಧಿಗೆ ಕಾರಾವಾಸದ ದಂಡನೆ ಶಿಕ್ಷೆ ವಿಧಿಸಿದ್ದರೆ; ಅಥವಾ

(ಡಿಎ) ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದೇ ಉಪಬಂಧಗಳನ್ನು ರಾಜಪತ್ರದಲ್ಲಿ ಅಥವಾ ಪ್ರಕಟಿಸಿರುವ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರವು

ನಿರ್ದಿಷ್ಟಪಡಿಸಬಹುದಾದಂಥ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳನ್ನು ಭಾರತೀಯ ಮೂಲದ ಸಾಗರೋತ್ತರ ನಾಗರಿಕ ಕಾರ್ಡ್ ಹೋಲ್ಡರನು ಉಲ್ಲಂಘಿಸಿದ್ದಾನೆಂಬುದು; ಅಥವಾ

(ಇ) ಭಾರತದ ಸಾರ್ವಭೌಮತ್ವ ಹಾಗೂ ನಿಷ್ಠೆಯ, ಭಾರತದ ಸುರಕ್ಷತೆಯ, ಯಾವುದೇ ವಿದೇಶಿ ರಾಷ್ಟ್ರದೊಂದಿಗೆ ಭಾರತದ ಸ್ನೇಹ ಸಂಬಂಧಗಳ ಅಥವಾ ಸಾರ್ವಜನಿಕ ಹಿತದೃಷ್ಟಿಯಿಂದ ನೋಂದಣಿಯನ್ನು ರದ್ದು ಮಾಡುವುದು ಅವಶ್ಯಕವೆಂಬುದು ಮನವರಿಕೆಯಾದರೆ; ಅಥವಾ

(ಎಫ್) 7ಎ ಪ್ರಕರಣದ (1)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಅಂಥ ಕಾರ್ಡನ್ನು ಪಡೆಯಲಾದ ಭಾರತದ ಆ ಸಾಗರೋತ್ತರ ನಾಗರಿಕ ಕಾರ್ಡ್ ಹೊಲ್ಡರನ ವಿವಾಹವನ್ನು,–

(i) ಕಾನೂನು ಸಕ್ಷಮ ನ್ಯಾಯಾಲಯದ ಮೂಲಕ ರದ್ದುಮಾಡಲಾದ ಅಥವಾ ಅನ್ಯಥಾ; ಅಥವಾ

(ii) ರದ್ದು ಮಾಡದ ಆದರೆ, ಅಂಥ ವಿವಾಹದ ಜೀವನ ನಿರ್ವಹಣಾ ಅವಧಿಯಲ್ಲಿ ಇತರೆ ಯಾರೇ ವ್ಯಕ್ತಿಯೊಂದಿಗೆ ಅವನ ವಿವಾಹವನ್ನು ವಿಧಿವತ್ತಾಗಿ ನೆರವೇರಿಸಲಾದ

– 7ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರದಾನ ಮಾಡಿದ ನೋಂದಣಿಯನ್ನು ಆದೇಶದ ಮೂಲಕ ರದ್ದುಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಯಾವ ಆದೇಶವನ್ನು ಭಾರತೀಯ ಮೂಲದ ಆ ಸಾಗರೋತ್ತರ ನಾಗರಿಕ ಕಾರ್ಡ್ ಹೋಲ್ಡರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದ ಹೊರತು ಹೊರಡಿಸತಕ್ಕದ್ದಲ್ಲ.

## ನಾಗರಿಕತ್ವದ ಮುಕ್ತಾಯ

**8. ನಾಗರಿಕತ್ವದ ಪರಿತ್ಯಾಗ.–** (1) ಪೂರ್ಣ ವಯಸ್ಸಿನ ಮತ್ತು ಸಾಮರ್ಥ್ಯವನ್ನು ಹೊಂದಿರುವ ಭಾರತದ ಯಾರೇ ನಾಗರಿಕನು ನಿಯಮಿಸಿದ ರೀತಿಯಲ್ಲಿ ತನ್ನ ಭಾರತದ ನಾಗರಿಕತ್ವವನ್ನು ಪರಿತ್ಯಜಿಸುವ ಘೋಷಣೆಯನ್ನು ಮಾಡಿದರೆ, ಆ ಘೋಷಣೆಯನ್ನು ನಿಯಮಿಸಿದ ಪ್ರಾಧಿಕಾರಿಯು

ನೋಂದಾಯಿಸಿಕೊಳ್ಳತಕ್ಕದ್ದು; ಮತ್ತು ಅಂಥ ನೋಂದಣಿಯಾದ ಮೇಲೆ ಆ ವ್ಯಕ್ತಿಯು ಭಾರತದ ನಾಗರಿಕನಾಗಿರುವುದು ನಿಂತುಹೋಗತಕ್ಕದ್ದು:

ಪರಂತು, ಅಂಥ ಯಾವುದೇ ಘೋಷಣೆಯನ್ನು, ಭಾರತವು ಯಾವುದೇ ಯುದ್ಧದಲ್ಲಿ ತೊಡಗಿರಬಹುದಾದ ಕಾಲದಲ್ಲಿ ಮಾಡಿದ್ದರೆ, ಅದರ ನೋಂದಣಿಯನ್ನು ಕೇಂದ್ರ ಸರ್ಕಾರವು ಅನ್ಯಥಾ ನಿರ್ದೇಶಿಸುವವರೆಗೆ ತಡೆಹಿಡಿಯತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಒಬ್ಬ ವ್ಯಕ್ತಿಯು ಭಾರತದ ನಾಗರಿಕನಾಗಿರುವುದು ನಿಂತು ಹೋಗಿರುವಲ್ಲಿ, ಅನಂತರ ಆ ವ್ಯಕ್ತಿಯ ಅಪ್ರಾಪ್ತ ವಯಸ್ಸಿನ ಮಗುವು ಭಾರತದ ನಾಗರಿಕನಾಗಿರುವುದು ನಿಂತು ಹೋಗತಕ್ಕದ್ದು:

ಪರಂತು, ಅಂಥ ಯಾವುದೇ ಮಗುವು, ಪೂರ್ಣ ವಯಸ್ಸಿಗೆ ಬಂದ ನಂತರ ಒಂದು ವರ್ಷದ ಒಳಗೆ, ಭಾರತದ ನಾಗರಿಕತ್ವವನ್ನು ಪುನಃ ಪಡೆಯಲು, ತಾನು ಇಚ್ಛಿಸುವುದಾಗಿ ಘೋಷಿಸಬಹುದು ಮತ್ತು ನಿಯಮಿಸಲಾದ ನಮೂನೆ ಮತ್ತು ರೀತಿಯಲ್ಲಿ ಅನಂತರ ಮತ್ತೆ ಅವನು ಭಾರತದ ನಾಗರಿಕನಾಗತಕ್ಕದ್ದು.

(3) *******.

**9. ನಾಗರಿಕತ್ವದ ಮುಕ್ತಾಯ.–** (1) ಬೇರೊಂದು ದೇಶದ ನಾಗರಿಕತ್ವವನ್ನು ದೇಶೀಕರಣದ ಮೂಲಕ ನೋಂದಣಿಯ ಮೂಲಕ ಅಥವಾ ಅನ್ಯಥಾ ಸ್ವಯಿಚ್ಛೆಯಿಂದ ಆರ್ಜಿಸುವ ಅಥವಾ 1950ರ ಜನವರಿ 26 ಮತ್ತು ಈ ಅಧಿನಿಯಮದ ಪ್ರಾರಂಭದ ನಡುವಣ ಯಾವುದೇ ಕಾಲದಲ್ಲಿ ಸ್ವಯಿಚ್ಛೆಯಿಂದ ಆರ್ಜಿಸಿದ್ದ ಭಾರತದ ಯಾರೇ ನಾಗರಿಕನು ಸಂದರ್ಭಾನುಸಾರ ಅಂಥ ಆರ್ಜನೆ ಅಥವಾ ಅಂಥ ಪ್ರಾರಂಭದ ನಂತರ, ಭಾರತದ ನಾಗರಿಕನಾಗಿರುವುದು ನಿಂತು ಹೋಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ, ಭಾರತವು ಯುದ್ಧದಲ್ಲಿ ತೊಡಗಿರಬಹುದಾದಂಥ ಅವಧಿಯಲ್ಲಿ ಬೇರೊಂದು ದೇಶದ ನಾಗರಿಕತ್ವವನ್ನು ಸ್ವಯಿಚ್ಛೆಯಿಂದ ಆರ್ಜಿಸುವ ಭಾರತದ ನಾಗರಿಕನಿಗೆ, ಕೇಂದ್ರ ಸರ್ಕಾರವು, ಅನ್ಯಥಾ ನಿರ್ದೇಶಿಸುವವರೆಗೆ ಅನ್ವಯಿಸತಕ್ಕದ್ದಲ್ಲ.

(2) ಭಾರತದ ಯಾರೇ ನಾಗರಿಕನು, ಬೇರೊಂದು ದೇಶದ ನಾಗರಿಕತ್ವವನ್ನು ಯಾವಾಗ ಮತ್ತು ಹೇಗೆ ಆರ್ಜಿಸಿದನೆಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದನ್ನು ಈ ಬಗ್ಗೆ ನಿಯಮಿಸಬಹುದಾದಂಥ ಪ್ರಾಧಿಕಾರಿಯು, ಅಂಥ ರೀತಿಯಲ್ಲಿ ಮತ್ತು ಸಾಕ್ಷ್ಯದ ಅಂಥ ನಿಯಮಗಳಿಗೆ ಗಮನ ಕೊಟ್ಟು ನಿರ್ಧರಿಸತಕ್ಕದ್ದು.

**10. ನಾಗರಿಕತ್ವದ ಹರಣ.–** (1) ದೇಶೀಕರಣದ ಮೂಲಕ ಅಥವಾ ಸಂವಿಧಾನದ 5ನೇ ಅನುಚ್ಛೇದದ (ಸಿ) ಖಂಡದ ಕಾರಣ ಮಾತ್ರದಿಂದಲೇ ಅಥವಾ ಸಂವಿಧಾನದ 6ನೇ ಅನುಚ್ಛೇದದ (ಬಿ)(ii)ನೇ ಖಂಡದ ಅಥವಾ ಈ ಅಧಿನಿಯಮದ 5ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಮೇರೆಗಲ್ಲದೆ ಅನ್ಯಥಾ, ನೋಂದಣಿ ಮೂಲಕ ಹಾಗೆ ಭಾರತದ ನಾಗರಿಕನಾಗಿರುವವನು, ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಆದೇಶದ ಮೂಲಕ ಈ ನಾಗರಿಕತ್ವವನ್ನು ಕಳೆದುಕೊಂಡಿದ್ದರೆ, ಅವನು ಭಾರತದ ನಾಗರಿಕನಾಗಿರುವುದು ನಿಂತು ಹೋಗತಕ್ಕದ್ದು.

(2) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು,–

(ಎ) ನೋಂದಣಿ ಅಥವಾ ದೇಶೀಕರಣದ ಪ್ರಮಾಣಪತ್ರವನ್ನು ಮೋಸ, ಸುಳ್ಳು ನಿರೂಪಣೆ ಅಥವಾ ಯಾವುದೇ ಸಾರಭೂತವಾದ ಸಂಗತಿಯನ್ನು ಬಚ್ಚಿಡುವುದರ ಮೂಲಕ ಪಡೆಯಲಾಯಿತು ಎಂದು; ಅಥವಾ

(ಬಿ) ಆ ನಾಗರಿಕನು ಕಾನೂನು ಮೂಲಕ ಸ್ಥಾಪಿತವಾದ ಭಾರತ ಸಂವಿಧಾನಕ್ಕೆ ನಡೆ ಅಥವಾ ನುಡಿಯ ಮೂಲಕ ರಾಜದ್ರೋಹ ಅಥವಾ ಅವಿಶ್ವಾಸವನ್ನು ತೋರಿಸಿದ್ದಾನೆಂದು; ಅಥವಾ

(ಸಿ) ಆ ನಾಗರಿಕನು, ಭಾರತವು ಯಾವುದೇ ಯುದ್ಧದಲ್ಲಿ ತೊಡಗಿರಬಹುದಾದ ಕಾಲದಲ್ಲಿ ಶತ್ರುವಿನೊಡನೆ ಕಾನೂನು ವಿರುದ್ಧವಾಗಿ ವ್ಯಾಪಾರ ಮಾಡಿದ್ದಾನೆಂದು ಅಥವಾ ಸಂಪರ್ಕ ಹೊಂದಿದ್ದನೆಂದು ಅಥವಾ ಆ ಯುದ್ಧದಲ್ಲಿ ಶತ್ರುವಿಗೆ ಸಹಾಯಕವಾಗುವಂಥ ರೀತಿಯಲ್ಲಿ, ಅವನಿಗೆ ತಿಳಿದಂತೆ ನಡೆಸಲಾಗುತ್ತಿದ್ದ ಯಾವುದೇ ವ್ಯವಹಾರದಲ್ಲಿ ತೊಡಗಿದ್ದನೆಂದು ಅಥವಾ ಅದರೊಡನೆ ಸಂಬಂಧ ಹೊಂದಿದ್ದನೆಂದು; ಅಥವಾ

(ಡಿ) ಆ ನಾಗರಿಕನು ನೋಂದಣಿ ಅಥವಾ ದೇಶೀಕರಣದ ತರುವಾಯ ಐದು ವರ್ಷಗಳೊಳಗಾಗಿ, ಯಾವುದೇ ದೇಶದಲ್ಲಿ, ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದನೆಂದು; ಅಥವಾ

(ಇ) ಆ ನಾಗರಿಕನು ಏಳು ವರ್ಷಗಳ ನಿರಂತರ ಅವಧಿಯವರೆಗೆ ಸಾಮಾನ್ಯವಾಗಿ ಭಾರತದ ಹೊರಗೆ ಅಧಿವಾಸಿಯಾಗಿದ್ದನೆಂದು ಮತ್ತು ಆ ಅವಧಿಯಲ್ಲಿ ಭಾರತದ ಹೊರಗಿನ ದೇಶದಲ್ಲಿ ಯಾವುದೇ ಕಾಲದಲ್ಲಿ ಯಾವುದೇ ಶೈಕ್ಷಣಿಕ ಸಂಸ್ಥೆಯ ವಿದ್ಯಾರ್ಥಿಯಾಗಿಯೇ ಆಗಲಿ ಅಥವಾ

ಭಾರತದಲ್ಲಿನ ಯಾವುದೇ ಸರ್ಕಾರದ ಅಥವಾ ಭಾರತವು ಸದಸ್ಯತ್ವವನ್ನು ಹೊಂದಿರುವ ಅಂತರರಾಷ್ಟ್ರೀಯ ಸಂಘದ ಸೇವೆಯಲ್ಲಿಯೇ ಆಗಲಿ ಇರಲಿಲ್ಲ ಅಥವಾ ಭಾರತದ ನಾಗರಿಕತ್ವವನ್ನು ಉಳಿಸಿಕೊಳ್ಳುವ ಅವನ ಉದ್ದೇಶವನ್ನು ಭಾರತೀಯ ಕಾನ್ಸಲ್ ಕಚೇರಿಯಲ್ಲಿ, ನಿಯಮಿಸಿದ ರೀತಿಯಲ್ಲಿ ವಾರ್ಷಿಕವಾಗಿ ನೋಂದಾಯಿಸಿರಲಿಲ್ಲವೆಂದು;

–ಅದಕ್ಕೆ ಮನದಟ್ಟಾದರೆ ಅದು ಆದೇಶದ ಮೂಲಕ ಅಂಥ ಯಾರೇ ನಾಗರಿಕನ ಭಾರತದ ನಾಗರಿಕತ್ವವನ್ನು ಹರಣ ಮಾಡಬಹುದು.

(3) ಕೇಂದ್ರ ಸರ್ಕಾರವು, ವ್ಯಕ್ತಿಯು ಭಾರತದ ನಾಗರಿಕನಾಗಿ ಮುಂದುವರಿಯುವುದು ಸಾರ್ವಜನಿಕ ಹಿತಕ್ಕೆ ಸಹಾಯಕವಲ್ಲವೆಂದು ತನಗೆ ಮನದಟ್ಟಾದ ಹೊರತು, ಈ ಪ್ರಕರಣದ ಮೇರೆಗೆ, ಆ ವ್ಯಕ್ತಿಯ ನಾಗರಿಕತ್ವವನ್ನು ಹರಣ ಮಾಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು ಯಾವ ವ್ಯಕ್ತಿಯ ವಿರುದ್ಧ ಆದೇಶವನ್ನು (2)ನೇ ಉಪಪ್ರಕರಣದ (ಇ) ಖಂಡವನ್ನು ಹೊರತುಪಡಿಸಿ, ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರಣದ ಮೇಲೆ ಆದೇಶವನ್ನು ಮಾಡಲು ಉದ್ದೇಶಿಸಿದ್ದರೆ, ನಿಯಮಿಸಿದ ರೀತಿಯಲ್ಲಿ ಅದಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ, ಈ ಪ್ರಕರಣದ ಮೇರೆಗೆ ಅವನ ಪ್ರಕರಣವನ್ನು ವಿಚಾರಣಾ ಸಮಿತಿಗೆ ಒಪ್ಪಿಸುವ ಬಗ್ಗೆ ಅವನಿಗಿರುವ ಹಕ್ಕನ್ನು ಅವನಿಗೆ ತಿಳಿಸಿ ಬರಹದಲ್ಲಿ ನೋಟೀಸು ಕೊಡತಕ್ಕದ್ದು.

(5) (2)ನೇ ಉಪಪ್ರಕರಣದ (ಇ) ಖಂಡವನ್ನು ಹೊರತುಪಡಿಸಿ, ಆ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕಾರಣದ ಮೇಲೆ ವ್ಯಕ್ತಿಯ ವಿರುದ್ಧ ಆದೇಶ ನೀಡಲು ಉದ್ದೇಶಿಸಿದ್ದರೆ ಮತ್ತು ಆ ವ್ಯಕ್ತಿಯು ನಿಯಮಿಸಿದ ರೀತಿಯಲ್ಲಿ ಹಾಗೆ ಅರ್ಜಿಯನ್ನು ಸಲ್ಲಿಸಿದರೆ, ಕೇಂದ್ರ ಸರ್ಕಾರವು (ಕಳೆದ ಕನಿಷ್ಠ ಹತ್ತು ವರ್ಷಗಳು ನ್ಯಾಯಿಕ ಪದವನ್ನು ಹೊಂದಿದ್ದ ವ್ಯಕ್ತಿಯಾಗಿರುವ) ಒಬ್ಬ ಅಧ್ಯಕ್ಷ ಮತ್ತು ಈ ಬಗ್ಗೆ ಕೇಂದ್ರ ಸರ್ಕಾರವು ನೇಮಕ ಮಾಡಿದ ಇತರ ಇಬ್ಬರು ಸದಸ್ಯರನ್ನೊಳಗೊಂಡ ಒಂದು ವಿಚಾರಣಾ ಸಮಿತಿಗೆ ಆ ಪ್ರಕರಣವನ್ನು ಒಪ್ಪಿಸತಕ್ಕದ್ದು ಮತ್ತು ಯಾವುದೇ ಇತರ ಪ್ರಕರಣದಲ್ಲಿ ಒಪ್ಪಿಸಬಹುದು.

(6) ವಿಚಾರಣಾ ಸಮಿತಿಯು, ಹಾಗೆ ಒಪ್ಪಿಸಿದ ಮೇಲೆ ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು; ಮತ್ತು ಕೇಂದ್ರ

ಸರ್ಕಾರವು, ಈ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವಾಗ, ಸಾಮಾನ್ಯವಾಗಿ ಅಂಥ ವರದಿಯಿಂದ ಮಾರ್ಗದರ್ಶನ ಪಡೆಯತಕ್ಕದ್ದು.

**ಅನುಪೂರಕ**

**11. [ಬಿಟ್ಟುಬಿಡಲಾಗಿದೆ.]**

**12. [ಬಿಟ್ಟುಬಿಡಲಾಗಿದೆ.]**

**13. ಸಂದೇಹದ ಸಂದರ್ಭದಲ್ಲಿ ನಾಗರಿಕತ್ವದ ಪ್ರಮಾಣಪತ್ರ.–** ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಆಲೋಚಿಸುವಂಥ ಸಂದರ್ಭಗಳಲ್ಲಿ, ಯಾರ ಭಾರತ ನಾಗರಿಕತ್ವದ ಬಗ್ಗೆ ಸಂದೇಹವಿದೆಯೋ ಆ ವ್ಯಕ್ತಿಯನ್ನು, ಭಾರತದ ನಾಗರಿಕನೆಂದು ಪ್ರಮಾಣೀಕರಿಸಬಹುದು; ಮತ್ತು ಈ ಪ್ರಕರಣದ ಮೇರೆಗೆ ನೀಡಿದ ಪ್ರಮಾಣಪತ್ರವು, ಮೋಸ, ಸುಳ್ಳು ನಿರೂಪಣೆ ಅಥವಾ ಯಾವುದೇ ಸಾರಭೂತವಾದ ಸಂಗತಿಯನ್ನು ಬಚ್ಚಿಡುವ ಮೂಲಕ ಪಡೆಯಲಾಯಿತೆಂದು ರುಜುವಾತುಪಡಿಸಿದ ಹೊರತು, ಅದರ ದಿನಾಂಕದಂದು ಆ ವ್ಯಕ್ತಿಯು ಅಂಥ ನಾಗರಿಕನಾಗಿದ್ದನೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು, ಆದರೆ ಅದಕ್ಕಿಂತ ಮುಂಚಿನ ದಿನಾಂಕದಲ್ಲಿ, ಅವನು ಅಂಥ ನಾಗರಿಕನಾಗಿದ್ದನೆಂಬುದರ ಬಗ್ಗೆ ಯಾವುದೇ ಸಾಕ್ಷ್ಯಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**14. 5, 6 ಮತ್ತು 7ಎ ಪ್ರಕರಣಗಳ ಮೇರೆಗಿನ ಅರ್ಜಿಯ ವಿಲೆ.–** (1) ನಿಯಮಿಸಲಾದ ಪ್ರಾಧಿಕಾರಿ ಅಥವಾ ಕೇಂದ್ರ ಸರ್ಕಾರವು ತನ್ನ ವಿವೇಚನಾನುಸಾರ 5, 6 ಮತ್ತು 7ಎ ಪ್ರಕರಣಗಳ ಮೇರೆಗಿನ ಅರ್ಜಿಯನ್ನು ಮಂಜೂರು ಮಾಡಬಹುದು ಅಥವಾ ನಿರಾಕರಿಸಬಹುದು ಮತ್ತು ಅಂಥ ಮಂಜೂರಾತಿ ಅಥವಾ ನಿರಾಕರಣೆಯ ಬಗ್ಗೆ ಯಾವುವೇ ಕಾರಣಗಳನ್ನು ಕೊಡಲು ಅದನ್ನು ಅಗತ್ಯಪಡಿಸತಕ್ಕದ್ದಲ್ಲ.

(2) 15ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಹಿಂದೆ ಹೇಳಿದಂತೆ, ಅಂಥ ಯಾವುದೇ ಅರ್ಜಿಯ ಮೇಲೆ ನಿಯಮಿಸಲಾದ ಪ್ರಾಧಿಕಾರಿಯ ಅಥವಾ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

**14ಎ. ರಾಷ್ಟ್ರೀಯ ಗುರುತು ಕಾರ್ಡ್‌ಗಳ ನೀಡಿಕೆ.–** (1) ಕೇಂದ್ರ ಸರ್ಕಾರವು, ಭಾರತದ ಪ್ರತಿಯೊಬ್ಬ ನಾಗರಿಕನನ್ನು ಕಡ್ಡಾಯವಾಗಿ ನೋಂದಾಯಿಸಬಹುದು ಮತ್ತು ಅವನಿಗೆ ರಾಷ್ಟ್ರೀಯ ಗುರುತು ಕಾರ್ಡನ್ನು ನೀಡಬಹುದು.

(2) ಕೇಂದ್ರ ಸರ್ಕಾರವು, ಭಾರತದ ನಾಗರಿಕರ ರಾಷ್ಟ್ರೀಯ ರಿಜಿಸ್ಟರನ್ನು ಇಡಬಹುದು ಮತ್ತು ಆ ಉದ್ದೇಶಕ್ಕಾಗಿ ರಾಷ್ಟ್ರೀಯ ನೋಂದಣಿ ಪ್ರಾಧಿಕಾರವನ್ನು ಸ್ಥಾಪಿಸಬಹುದು.

(3) ಜನನ ಮತ್ತು ಮರಣ ನೋಂದಣಿ ಅಧಿನಿಯಮ, 1969 (1969ರ 18)ರ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ರಿಜಿಸ್ಟ್ರಾರ್-ಜನರಲ್, ಭಾರತ ಇವರು ನಾಗರಿಕತ್ವ (ತಿದ್ದುಪಡಿ) ಅಧಿನಿಯಮ, 2003 (2004ರ 6)ರ ಪ್ರಾರಂಭವಾದ ದಿನದಂದು ಮತ್ತು ಅಂದಿನಿಂದ ರಾಷ್ಟ್ರೀಯ ನೋಂದಣಿ ಪ್ರಾಧಿಕಾರಿಯಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ನಾಗರಿಕ ನೋಂದಣಿ ರಿಜಿಸ್ಟ್ರಾರ್ ಜನರಲ್ ಆಗಿ ಪ್ರಕಾರ್ಯಗಳನ್ನು ನೇರವೇರಿಸತಕ್ಕದ್ದು.

(4) ಕೇಂದ್ರ ಸರ್ಕಾರವು, ನಾಗರಿಕ ನೋಂದಣಿ ರಿಜಿಸ್ಟ್ರಾರ್ ಜನರಲ್‌ರವರಿಗೆ, ಅವರ ಪ್ರಕಾರ್ಯಗಳನ್ನು ಹಾಗೂ ಜವಾಬ್ದಾರಿಗಳನ್ನು ನೆರವೇರಿಸಲು ಅಗತ್ಯವಾಗಬಹುದಾದಷ್ಟು ಇತರ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಯನ್ನು ನೇಮಕ ಮಾಡಬಹುದು.

(5) ಭಾರತದ ನಾಗರಿಕರ ಕಡ್ಡಾಯ ನೋಂದಣಿಗೆ ಅನುಸರಿಸಬೇಕಾದ ಪ್ರಕ್ರಿಯೆಯು ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

**15. ಪುನರೀಕ್ಷಣೆ.**– (1) ನಿಯಮಿಸಲಾದ ಪ್ರಾಧಿಕಾರಿ ಅಥವಾ ಯಾರೇ ಅಧಿಕಾರಿ ಅಥವಾ (ಕೇಂದ್ರ ಸರ್ಕಾರವನ್ನು ಹೊರತುಪಡಿಸಿ) ಇತರ ಪ್ರಾಧಿಕಾರಿಯು ಈ ಅಧಿನಿಯಮದ ಮೇರೆಗೆ ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ, ಆ ಆದೇಶದ ಪುನರೀಕ್ಷಣೆಗಾಗಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು:

ಪರಂತು, ಕೇಂದ್ರ ಸರ್ಕಾರವು ಅರ್ಜಿದಾರನು ಸಾಕಷ್ಟು ಕಾರಣದಿಂದಾಗಿ ಸಕಾಲದಲ್ಲಿ ಅರ್ಜಿಯನ್ನು ಸಲ್ಲಿಸಲು ಪ್ರತಿಬಂಧಿತನಾಗಿದ್ದನೆಂದು ಅದಕ್ಕೆ ಮನದಟ್ಟಾದರೆ, ಮೂವತ್ತು ದಿನಗಳ ಸದರಿ ಅವಧಿಯ ಮುಕ್ತಾಯದ ನಂತರ ಅರ್ಜಿಯನ್ನು ಸ್ವೀಕರಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು ಬಾಧಿತ ವ್ಯಕ್ತಿಯ ಅರ್ಜಿಯನ್ನು ಮತ್ತು ಆದೇಶವನ್ನು ಮಾಡಿದ ಅಧಿಕಾರಿ ಅಥವಾ ಪ್ರಾಧಿಕಾರಿಯು ಸಲ್ಲಿಸಬಹುದಾದ ಅದರ ಮೇಲಿನ ಯಾವುದೇ ವರದಿಯನ್ನು ಪರ್ಯಾಲೋಚಿಸಿದ ನಂತರ, ಅರ್ಜಿಗೆ

ಸಂಬಂಧಪಟ್ಟಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**15ಎ. ಪುನರವಲೋಕನ.–** (1) ಕೇಂದ್ರ ಸರ್ಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಅಂಥ ಆದೇಶದ ಪುನರವಲೋಕನಕ್ಕಾಗಿ ಅರ್ಜಿ ಸಲ್ಲಿಸಬಹುದು:

ಪರಂತು, ಅಂಥ ಆದೇಶದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಅಂಥ ಆದೇಶವನ್ನು ಪುನರವಲೋಕನ ಮಾಡಲು ಅರ್ಜಿದಾರನು ಸಾಕಷ್ಟು ಕಾರಣಗಳಿಂದಾಗಿ ಸಕಾಲದಲ್ಲಿ ಸಲ್ಲಿಸಲು ಆಗಲಿಲ್ಲವೆಂಬುದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ ಸದರಿ ಮೂವತ್ತು ದಿನಗಳು ಮುಗಿದ ನಂತರವೂ ಅರ್ಜಿಯನ್ನು ಪುರಸ್ಕರಿಸಬಹುದು:

ಮತ್ತೂ ಪರಂತು, 14ಎ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಹೊರಡಿಸಿದ ಆದೇಶದ ಪುನರವಲೋಕನಕ್ಕಾಗಿ ಸಲ್ಲಿಸಿದ ಅರ್ಜಿಯನ್ನು 18ನೇ ಪ್ರಕರಣದ (2)ನೇ ಉಪಪ್ರಕರಣದ (iಎ) ಖಂಡದಲ್ಲಿ ಗೊತ್ತುಪಡಿಸಿರಬಹುದಾದ ಪ್ರಕ್ರಿಯೆಯಲ್ಲಿ ಹೇಳಿರುವ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸಲ್ಲಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು, ಸರಿಯೆಂದು ತಾನು ಭಾವಿಸಿದಂಥ ಆದೇಶವನ್ನು ಮಾಡಬಹುದು ಮತ್ತು ಅಂಥ ಪುನರವಲೋಕನದಲ್ಲಿ ಕೇಂದ್ರ ಸರ್ಕಾರವು ಕೈಗೊಂಡ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**16. ಅಧಿಕಾರಗಳ ಪ್ರತ್ಯಾಯೋಜನೆ.–** ಕೇಂದ್ರ ಸರ್ಕಾರವು, ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ಅಂಥ ಷರತ್ತುಗಳ ಮೇರೆಗೆ, ಯಾವುವಾದರೂ ಇದ್ದರೆ, ಈ ಅಧಿನಿಯಮದ 10ನೇ ಪ್ರಕರಣ ಮತ್ತು 18ನೇ ಪ್ರಕರಣಗಳ ಉಪಬಂಧಗಳನ್ನು ಹೊರತುಪಡಿಸಿ ಇತರ ಯಾವುವೇ ಉಪಬಂಧಗಳ ಮೂಲಕ ತನಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿ ಅಥವಾ ಪ್ರಾಧಿಕಾರಿಯು ಸಹ ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

**17. ಅಪರಾಧಗಳು.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಮಾಡಬೇಕಾದ ಅಥವಾ ಮಾಡತಕ್ಕದ್ದಲ್ಲದ ಯಾವುದೇ ಕಾರ್ಯವನ್ನು ದೊರಕಿಸಿಕೊಳ್ಳುವ ಉದ್ದೇಶಕ್ಕಾಗಿ ಮುಖ್ಯ ವಿವರದಲ್ಲಿ ಸುಳ್ಳು

ವಿವರ ಇರುವಂಥ ಯಾವುದೇ ನಿರೂಪಣೆಯನ್ನು ತಿಳಿದೂ ಮಾಡಿದ್ದರೆ, ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡನೀಯನಾಗತಕ್ಕದ್ದು.

**18. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತ ಮಾಡುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು,–

(ಎ) ಈ ಅಧಿನಿಯಮದ ಮೇರೆಗೆ ನೋಂದಾಯಿಸತಕ್ಕದ್ದೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಯಾವುದೇ ನೋಂದಣಿ ಮತ್ತು ಅಂಥ ನೋಂದಣಿಯ ಬಗೆಗಿನ ಷರತ್ತುಗಳು ಮತ್ತು ಪರಿಬಂಧಗಳು;

(ಎಎ) 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಘೋಷಣೆಯನ್ನು ಯಾವ ನಮೂನೆಯಲ್ಲಿ ಹಾಗೂ ಯಾವ ರೀತಿಯಲ್ಲಿ ಮಾಡಬೇಕೋ ಆ ನಮೂನೆ ಹಾಗೂ ಆ ರೀತಿ;

(ಬಿ) ಈ ಅಧಿನಿಯಮದ ಮೇರೆಗೆ ಬಳಸಬೇಕಾದ ನಮೂನೆಗಳು ಮತ್ತು ಇಡಬೇಕಾದ ರಿಜಿಸ್ಟರ್‌ಗಳು;

(ಸಿ) ಈ ಅಧಿನಿಯಮದ ಮೇರೆಗಿನ ನಿಷ್ಠಾ ಪ್ರಮಾಣವಚನಗಳನ್ನು ಭೋಧಿಸುವುದು ಮತ್ತು ತೆಗೆದುಕೊಳ್ಳುವುದು ಮತ್ತು ಅಂಥ ಪ್ರಮಾಣವಚನಗಳನ್ನು ಯಾವ ಕಾಲದೊಳಗೆ ಮತ್ತು ಯಾವ ರೀತಿಯಲ್ಲಿ ತೆಗೆದುಕೊಳ್ಳತಕ್ಕದ್ದು ಮತ್ತು ದಾಖಲು ಮಾಡತಕ್ಕದ್ದು;

(ಡಿ) ಈ ಅಧಿನಿಯಮದ ಮೇರೆಗೆ, ಯಾರೇ ವ್ಯಕ್ತಿಯು ಕೊಡಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಯಾವುದೇ ನೋಟೀಸನ್ನು ಕೊಡುವುದು;

(ಇ) ಈ ಅಧಿನಿಯಮದ ಮೇರೆಗೆ ನಾಗರಿಕತ್ವವನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ, ದೇಶೀಕರಣದ ಪ್ರಮಾಣಪತ್ರಗಳ ನೋಂದಣಿಯ ರದ್ದಿಯಾತಿ ಮತ್ತು ಅವುಗಳ ರದ್ದಿಯಾತಿ ಮತ್ತು ತಿದ್ದುಪಡಿ ಹಾಗೂ ಆ ಉದ್ದೇಶಗಳಿಗಾಗಿ ಅಂಥ ಪ್ರಮಾಣಪತ್ರಗಳನ್ನು ವಶಾವಣೆ ಮಾಡುವುದು;

(ಇಇ) 6ಎ ಪ್ರಕರಣದ (6)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಹೇಳಿರುವ ಘೋಷಣೆಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ನಮೂನೆಯಲ್ಲಿ ಮತ್ತು ಯಾವ ಪ್ರಾಧಿಕಾರಿಗೆ ಸಲ್ಲಿಸಬೇಕೋ ಆ ರೀತಿ ಮತ್ತು ಆ ನಮೂನೆ ಮತ್ತು ಆ ಪ್ರಾಧಿಕಾರಿ ಮತ್ತು ಅಂಥ ಘೋಷಣೆಗೆ ಸಂಬಂಧಿಸಿದ ಇತರೆ ವಿಷಯಗಳು;

(ಇಇಐ) 6ಬಿ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಪ್ರಮಾಣಪತ್ರವನ್ನು ಅಥವಾ ದೇಶೀಕರಣ ಪ್ರಮಾಣಪತ್ರವನ್ನು ಪ್ರದಾನ ಮಾಡಲು ಷರತ್ತುಗಳನ್ನು, ನಿರ್ಬಂಧಗಳನ್ನು ಮತ್ತು ರೀತಿಯನ್ನು;

(ಇಇಎ) ಆ ಷರತ್ತುಗಳು ಮತ್ತು ಆ ರೀತಿಗೆ ಒಳಪಡುವಂಥ ವ್ಯಕ್ತಿಯು 7ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭಾರತದ ಕಾರ್ಡ್ ಹೋಲ್ಡರ್ ಸಾಗರೋತ್ತರ ನಾಗರಿಕನೆಂದು ನೋಂದಾಯಿಸಬಹುದು;

(ಇಇಬಿ) 7ಸಿ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭಾರತ ಸಾಗರೋತ್ತರ ನಾಗರಿಕನ ಪರಿತ್ಯಾಗಕ್ಕಾಗಿ ಘೋಷಣೆ ಮಾಡುವ ರೀತಿ;

(ಎಫ್) ಭಾರತೀಯ ಕಾನ್ಸಲ್ ಕಚೇರಿಗಳಲ್ಲಿ, ಭಾರತದ ಹೊರಗೆ ಹುಟ್ಟುವ ಅಥವಾ ಸಾಯುವ ಯಾವುದೇ ವರ್ಗದ ಅಥವಾ ವಿವರಣೆಯ ವ್ಯಕ್ತಿಗಳ ಜನನ ಮತ್ತು ಮರಣಗಳ ನೋಂದಣಿ;

(ಜಿ) ನಿಷ್ಠಾ ಪ್ರಮಾಣವಚನವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಮತ್ತು ದಸ್ತಾವೇಜುಗಳ ಪ್ರಮಾಣಿತ ಅಥವಾ ಇತರ ಪ್ರತಿಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೇರೆಗಿನ ಅರ್ಜಿಗಳು, ನೋಂದಣಿಗಳು, ಘೋಷಣೆಗಳು ಮತ್ತು ಪ್ರಮಾಣಪತ್ರಗಳಿಗೆ ಸಂಬಂಧಿಸಿದಂತೆ ಫೀಜನ್ನು ವಿಧಿಸುವುದು ಮತ್ತು ಸಂಗ್ರಹಣೆ;

(ಹೆಚ್) ಬೇರೊಂದು ದೇಶದ ನಾಗರಿಕತ್ವವನ್ನು ಆರ್ಜಿಸುವ ಪ್ರಶ್ನೆಯನ್ನು ನಿರ್ಧರಿಸಲು ಪ್ರಾಧಿಕಾರಿ, ಅಂಥ ಪ್ರಾಧಿಕಾರಿಯು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅಂಥ ಪ್ರಕರಣಗಳಿಗೆ ಸಂಬಂಧಪಟ್ಟ ಸಾಕ್ಷ್ಯದ ನಿಯಮಗಳು;

(ಐ) 10ನೇ ಪ್ರಕರಣದ ಮೇರೆಗೆ ನೇಮಕಗೊಂಡ ವಿಚಾರಣಾ ಸಮಿತಿಗಳು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅಂಥ ಸಮಿತಿಗಳಿಗೆ ಸಿವಿಲ್ ನ್ಯಾಯಾಲಯಗಳ ಯಾವುವೇ ಅಧಿಕಾರಗಳು, ಹಕ್ಕುಗಳು ಮತ್ತು ವಿಶೇಷಾಧಿಕಾರಗಳ ಪ್ರದಾನ;

(ಐಎ) 14ಎ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಭಾರತದ ನಾಗರಿಕರ ಕಡ್ಡಾಯ ನೋಂದಣಿಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಜೆ) ಪುನರೀಕ್ಷಣೆಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾದ ರೀತಿ ಮತ್ತು ಅಂಥ ಅರ್ಜಿಗಳೊಂದಿಗೆ ವ್ಯವಹರಿಸುವಾಗ ಕೇಂದ್ರ ಸರ್ಕಾರವು ಅನುಸರಿಸಬೇಕಾದ ಪ್ರಕ್ರಿಯೆ; ಮತ್ತು

(ಕೆ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ

– ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ, ಕೇಂದ್ರ ಸರ್ಕಾರವು, ಅದರ ಉಲ್ಲಂಘನೆಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

ಪರಂತು, (2)ನೇ ಉಪಪ್ರಕರಣದ (iಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ವಿಷಯವನ್ನು ಉಲ್ಲಂಘಿಸಿದರೆ ಆ ವಿಷಯಕ್ಕೆ ಸಂಬಂಧಪಟ್ಟಂತೆ ರಚಿಸುವ ಯಾವುದೇ ನಿಯಮದಲ್ಲಿ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯ ದಂಡನೆಯನ್ನು ಅಥವಾ ಅವೆರಡೂ ದಂಡನೆಗೆ ಉಪಬಂಧ ಕಲ್ಪಿಸತಕ್ಕದ್ದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನದ ಅಥವಾ ಹಿಂದೆ ಹೇಳಿದ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ

ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**19. [ನಿರಸಿತ.]**

**ಮೊದಲನೇ ಅನುಸೂಚಿ–[ಬಿಟ್ಟುಬಿಡಲಾಗಿದೆ.]**

## ಎರಡನೇ ಅನುಸೂಚಿ

[5(2) ಮತ್ತು 6(2)ನೇ ಪ್ರಕರಣಗಳನ್ನು ನೋಡಿ]

## ನಿಷ್ಠಾ ಪ್ರಮಾಣವಚನ

ಎ.ಬಿ........................... ಆದ ನಾನು ಕಾನೂನು ಮೂಲಕ ಸ್ಥಾಪಿತವಾದ ಭಾರತ ಸಂವಿಧಾನಕ್ಕೆ ನಿಜವಾದ ಶ್ರದ್ಧೆಯನ್ನು ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಮತ್ತು ಭಾರತದ ಕಾನೂನುಗಳನ್ನು ನಿಷ್ಠಾಪೂರ್ವಕವಾಗಿ ಪಾಲಿಸುತ್ತೇನೆಂದು ಮತ್ತು ಭಾರತದ ನಾಗರಿಕನಾಗಿ ನನ್ನ ಕರ್ತವ್ಯಗಳನ್ನು ನೆರವೇರಿಸುತ್ತೇನೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ (ಅಥವಾ ಪ್ರಮಾಣ ಮಾಡುತ್ತೇನೆ).

## ಮೂರನೇ ಅನುಸೂಚಿ

**[6(1)ನೇ ಪ್ರಕರಣವನ್ನು ನೋಡಿ]**

## ದೇಶೀಕರಣಕ್ಕಾಗಿ ಅರ್ಹತೆಗಳು

ವ್ಯಕ್ತಿಯ ದೇಶೀಕರಣಕ್ಕಾಗಿ ಬೇಕಾದ ಅರ್ಹತೆಗಳು–

(ಎ) ಯಾವ ದೇಶದಲ್ಲಿ, ಭಾರತದ ನಾಗರಿಕರನ್ನು ಆ ದೇಶದ ಕಾನೂನು ಅಥವಾ ಆಚರಣೆಯ ಮೂಲಕ, ದೇಶೀಕರಣದ ಮೂಲಕ, ಆ ದೇಶದ ಪ್ರಜೆಗಳು ಅಥವಾ ನಾಗರಿಕರಾಗುವುದನ್ನು ಪ್ರತಿಬಂಧಿಸಲಾಗಿರುವುದೋ ಅವನು ಆ ಯಾವುದೇ ದೇಶದ ಪ್ರಜೆ ಅಥವಾ ನಾಗರಿಕನಾಗಿಲ್ಲದೆ ಇರುವುದು;

(ಬಿ) ಅವನು, ಯಾವುದೇ ದೇಶದ ನಾಗರಿಕನಾಗಿದ್ದರೆ;

(ಸಿ) ಅರ್ಜಿಯ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಹನ್ನೆರಡು ತಿಂಗಳುಗಳ ಅವಧಿ ಆದ್ಯಂತ ಭಾರತದಲ್ಲಿ ವಾಸಿಸುತ್ತಿರುವುದು ಅಥವಾ ಭಾರತದಲ್ಲಿನ ಸರ್ಕಾರದ ಸೇವೆಯಲ್ಲಿರುವುದು ಅಥವಾ ಭಾಗಶಃ ಒಂದರಲ್ಲಿ ಅಥವಾ ಭಾಗಶಃ ಇನ್ನೊಂದರಲ್ಲಿ ಇರುವುದು:

ಪರಂತು, ವಿಶೇಷ ಸಂದರ್ಭ ಸನ್ನಿವೇಶಗಳಿವೆ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆಯಾದರೆ, ಅದು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿದ ತರುವಾಯ ಬೇರೆಬೇರೆ ಸಂದರ್ಭಗಳಲ್ಲಿ ವ್ಯತ್ಯಾಸವಾಗಬಹುದಾದಂಥ ಗರಿಷ್ಠ ಮೂವತ್ತು ದಿನಗಳ ಅವಧಿಯ ವಿನಾಯಿತಿಯನ್ನು ಸಡಿಲಿಸಬಹುದು.

(ಡಿ) ಸದರಿ ಹನ್ನೆರಡು ತಿಂಗಳುಗಳ ಅವಧಿಯ ನಿಕಟಪೂರ್ವದಲ್ಲಿ ಹದಿನಾಲ್ಕು ವರ್ಷಗಳಲ್ಲಿ, ಅವನು ಒಟ್ಟಿನಲ್ಲಿ ಹನ್ನೊಂದು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಗಳವರೆಗೆ ಭಾರತದಲ್ಲಿ ವಾಸ ಮಾಡಿರುವುದು ಅಥವಾ ಭಾರತ ಸರ್ಕಾರದ ಸೇವೆಯಲ್ಲಿರುವುದು ಅಥವಾ ಭಾಗಶಃ ಒಂದರಲ್ಲಿ ಮತ್ತು ಭಾಗಶಃ ಇನ್ನೊಂದರಲ್ಲಿ ಇರುವುದು;

ಪರಂತು, ಅಫ್ಘಾನಿಸ್ತಾನ, ಬಾಂಗ್ಲಾದೇಶ ಅಥವಾ ಪಾಕಿಸ್ತಾನದಲ್ಲಿರುವ "ಹಿಂದೂ, ಸಿಖ್, ಬೌದ್ಧ, ಜೈನ, ಪಾರ್ಸಿ ಅಥವಾ ಕ್ರಿಶ್ಚಿಯನ್ ಸಮುದಾಯದ ವ್ಯಕ್ತಿಗೆ ಸಂಬಂಧಿಸಿದಂತೆ ಈ ಖಂಡದ ಅಡಿಯಲ್ಲಿ ಅಗತ್ಯಪಡಿಸಿರುವ ಅವಧಿಯನ್ನು ಒಟ್ಟು "ಹನ್ನೊಂದು ವರ್ಷಗಳಿಗಿಂತ ಕಡಿಮೆಯಲ್ಲದ" ಎಂಬುದರ ಬದಲಿಗೆ "ಐದು ವರ್ಷಗಳಿಗಿಂತ ಕಡಿಮೆಯಲ್ಲದ" ಎಂದು ಓದಿಕೊಳ್ಳತಕ್ಕದ್ದು.

(ಇ) ಅವನು ಸಚ್ಚಾರಿತ್ರನಾಗಿರುವುದು;

(ಎಫ್) ಭಾರತ ಸಂವಿಧಾನದ ಎಂಟನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ಭಾಷೆಯಲ್ಲಿ ಅವನು ಸಾಕಷ್ಟು ತಿಳುವಳಿಕೆಯನ್ನು ಹೊಂದಿರುವುದು; ಮತ್ತು

(ಜಿ) ಅವನಿಗೆ ದೇಶೀಕರಣದ ಪ್ರಮಾಣಪತ್ರವನ್ನು ನೀಡಿದಲ್ಲಿ, ಅವನು ಭಾರತದಲ್ಲಿ ವಾಸ ಮಾಡಲು ಅಥವಾ ಭಾರತದಲ್ಲಿನ ಸರ್ಕಾರದ ಅಥವಾ ಭಾರತವು ಸದಸ್ಯತ್ವವನ್ನು ಹೊಂದಿರುವ, ಅಂತರರಾಷ್ಟ್ರೀಯ ಸಂಸ್ಥೆಯ ಅಥವಾ ಭಾರತದಲ್ಲಿ ಸ್ಥಾಪಿತವಾಗಿರುವ ಸಂಘ, ಕಂಪನಿ ಅಥವಾ ವ್ಯಕ್ತಿಗಳ ನಿಕಾಯದ ಅಡಿಯಲ್ಲಿ ಸೇವೆಗೆ ಸೇರಲು ಅಥವಾ ಅದರಲ್ಲಿ ಮುಂದುವರಿಯಲು ಉದ್ದೇಶಿಸಿರುವುದು:

ಪರಂತು, ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸುವ ಯಾವುದೇ ವಿಶಿಷ್ಟ ಪ್ರಕರಣದ ವಿಶೇಷ ಸಂದರ್ಭಗಳಲ್ಲಿ,–

(i) ಮೇಲಿನ (ಸಿ) ಖಂಡದ ಉದ್ದೇಶಗಳಿಗಾಗಿ ಪರಿಗಣಿಸಬೇಕಾದ ಅರ್ಜಿಯ ದಿನಾಂಕಕ್ಕೆ ಮುಂಚೆ ಆರು ತಿಂಗಳುಗಳಿಗಿಂತ ಹೆಚ್ಚಿಲ್ಲದಂತೆ ಕೊನೆಗೊಳ್ಳುವ ಹನ್ನೆರಡು ತಿಂಗಳುಗಳ ನಿರಂತರ ಅವಧಿಯನ್ನು ಅದು ಆ ದಿನಾಂಕದ ನಿಕಟಪೂರ್ವದ್ದಾಗಿದ್ದರೆ ಹೇಗೋ ಹಾಗೆ, ಅನುಮತಿಸಬಹುದು.

(ii) ಮೇಲಿನ (ಡಿ) ಖಂಡದಲ್ಲಿ ನಮೂದಿಸಿದ ಒಟ್ಟು ಅವಧಿಯನ್ನು ಲೆಕ್ಕ ಹಾಕಲು, ಪರಿಗಣಿಸಬೇಕಾದ ಅರ್ಜಿಯ ದಿನಾಂಕದ ಮುಂಚಿನ ಹದಿನೈದು ವರ್ಷಗಳಿಗಿಂತ ಮುಂಚಿತವಾದ ವಾಸ ಅಥವಾ ಸೇವೆಯ ಅವಧಿಗಳನ್ನು ಅನುಮತಿಸಬಹುದು.

**ನಾಲ್ಕನೇ ಅನುಸೂಚಿ– [ಬಿಟ್ಟುಬಿಡಲಾಗಿದೆ.]**